


**ಚುಟುಕ ವಿಶೇಷ**

# ಅಪರಂಜಿ

ತಿಳಿನಗೆಯ ಕಾರಂಜಿ



**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ



ಸಂಪುಟ 30
ಸಂಚಿಕೆ - 3
ಡಿಸೆಂಬರ್ - 2012

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಮ್ಮಲ್ಲಿ | **ಶಿವಕುಮಾರ್** | 3 |
| ರಿಸಾರ್ಟ್‌ನಲ್ಲಿ ಒಂದು ರಾತ್ರಿ | **ವತ್ಸಲ** | 6 |
| ಇನ್ನೊಂದು ಪ್ರಳಯ..... | **ಇ.ಆರ್. ರಾಮಚಂದ್ರನ್** | 7 |
| ಪ್ರಳಯ ತಪ್ಪಿಸಿಕೊಳ್ಳ....... | **ತುರುವೇಕೆರೆ ಪ್ರಸಾದ್** | 9 |
| ಎಳ್ಳಾಮಾಸಿ ಸಂಭ್ರಮ | **ಭೂಮಿತಾಯಿ** | 11 |
| ಸುದ್ದಿ ಚುರುಮುರಿ | **ಸಿ.ಆರ್. ಸತ್ಯ** | 13 |
| ಗ್ರಂಥಾವಲೋಕನ | **ವಿ. ಮರ್ಶಕ ರಾವ್** | 15 |
| ತುಂತುರು | **ದಂನಾಳ** | 17 |
| ಮುಂದೆ ಬರಲಿರುವ ಚಿತ್ರಗಳು | | 18 |
| ಕೂಗು | | 20 |
| ಪಾರ್ಲಿಮೆಂಟಿನ....... | **ಎನ್. ರಾಮನಾಥ್** | 22 |
| ನೀರಿಲ್ಲದ ಸುಖ | **ಜಲಜ** | 24 |
| ಕವಳಾವಲೋಕನ | | 26 |
| ಶ್ರೀಪತಿಯ ಸಂಸಾರ | **ಬೇಲೂರು ರಾಮಮೂರ್ತಿ** | 27 |
| ಹುರುಳಿ ಕಟ್ಟು | **ಎಚ್. ಗೋಪಾಲಕೃಷ್ಣ** | 28 |
| ವೈ.ಎನ್ಕೆ. ಅವರ ಕೊನೆ ಸಿಡಿಗಳು | | 31 |
| ಜೀವನಾಂದ್ರೆ ಇದೇ | **ಸಂಪಟೂರು ವಿಶ್ವನಾಥ** | 33 |
| ನೀವು ಬದುಕಿದ್ದೀರಾ ಸಾರ್ | **ಡಾ|| ಡಿ.ವಿ. ಗುರುಪ್ರಸಾದ್** | 36 |
| ಜನ-ಸಮ್ಮಾನ.... | **ಪ್ರಭಾ** | 39 |

**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*
ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಅಮೆರಿಕಾದ ರಾಜ್ಯವೊಂದರ ಹೆಸರನ್ನು **FAAWRIDA** ಎಂದು ಬದಲಾಯಿಸುತ್ತಾರಂತೆ !!

★★★

ಲೋಕಾಯುಕ್ತ ಬಲೆಗೆ ಲೆಕ್ಕಾಧಿಕಾರಿ: ವಾಷಿಂಗ್ ಮೇಷೀನಿನಲ್ಲಿ 10 ಲಕ್ಷ – ಸುದ್ದಿ

**● Money Laundering ಗೋಸ್ಕರ ಕಳಿಸಿದ್ದಿರಬಹುದು !!**

★★★

ಕಾಂಗ್ರೆಸ್‌ನತ್ತ ವಾಲಿದ ನಾಲ್ವರು ಪಕ್ಷೇತರ ಶಾಸಕರು – ಪತ್ರಿಕೆ

**● ಸದ್ಯ, ಬೀಳದಿದ್ದರೆ ಸಾಕು !!**

★★★

ಒಬಾಮ ಬಂದ, ಎಚ್.ಒನ್.ವೀ.ಸ ತಂದ ಅಂತ ಭಾರತೀಯರು ಧ್ಯಾನ ಮಾಡುತ್ತಿದ್ದಾರಂತೆ !!

★★★

ಏಳು ಸರ್ಕಾರೀ ವೈದ್ಯ ಕಾಲೇಜುಗಳ ಸ್ಥಾಪನೆ – ಸುದ್ದಿ

**● ಇವಕ್ಕೆಲ್ಲಾ ರೋಗಿಗಳನ್ನು ಎಲ್ಲಿಂದ ಹೊಂದಿಸೋದು ??**

★★★

ಭದ್ರತಾ ಸಿಬ್ಬಂದಿ ಕೊಲೆಗೈದು ದೇವಸ್ಥಾನದ ಹುಂಡಿ ಕಳವು – ಸುದ್ದಿ

**● ರಮಾ ರಮಣ ಗೋವಿಂದಾ...... !!**

★★★

ಮುಖ್ಯಮಂತ್ರಿ ಆಯ್ಕೆ ಹೈ ಕಮಾಂಡ್ ನಿರ್ಧರಿಸುತ್ತದೆ – ಖರ್ಗೆ

**● ನೆಹರೂ ಕಾಲದಿಂದ ಹೀಗೇ ಅಲ್ಲವೇ !!**

★★★



# “ನಮ್ಮ ನಿಮ್ಮಲ್ಲಿ”

**ಹ**ಲವಾರು ತಿಂಗಳುಗಳಿಂದ ಅಪರಂಜಿಯ ಪ್ರತಿ ಸಂಚಿಕೆಗೂ ಒಂದು ಥೀಮ್ ಅನ್ನು ಆರಿಸಿ ಆ ಪ್ರಧಾನ ವಿಷಯವನ್ನಾಧರಿಸಿದ ಬರಹಗಳನ್ನು ಆಹ್ವಾನಿಸುವ ಪರಿಪಾಠವನ್ನು ಪಾಲಿಸುತ್ತಿರುವುದನ್ನು ನೀವು ಗಮನಿಸಿರಬಹುದು. ಈ ಡಿಸೆಂಬರ್ ತಿಂಗಳ ಅಪರಂಜಿಯ ಪ್ರಧಾನ ವಸ್ತು, ಪುಟ್ಟ ಬರಹಗಳು, ಚಿಕ್ಕ ಪ್ರಬಂಧಗಳು ಹಾಗೂ ಸಣ್ಣ ಕಥೆಗಳು.

ಸಣ್ಣ ಕಥೆ ಅಂದರೆ ನಾನು ಚಿಕ್ಕಂದಿನಲ್ಲಿ ಕೇಳಿದ ಒಂದು ದೆವ್ವದ ಕಥೆ ನೆನಪಿಗೆ ಬರುತ್ತದೆ.

*ಇಬ್ಬರು ಒಂದು ರೈಲುಗಾಡಿಯಲ್ಲಿ ಹೋಗುತ್ತಿರುತ್ತಾರೆ. ಒಬ್ಬ ಇನ್ನೊಬ್ಬನನ್ನು ಕುರಿತು, ‘‘ನಿನಗೆ ದೆವ್ವಗಳಲ್ಲಿ ನಂಬಿಕೆ ಇದೆಯೇ?’’ ಅಂತ ಕೇಳುತ್ತಾನೆ. ಇನ್ನೊಬ್ಬಾತ, ‘‘ಖಂಡಿತ ಇಲ್ಲ’’ ಎಂದು ಹೇಳುತ್ತಲೇ ಅದೃಶ್ಯನಾಗುತ್ತಾನೆ.*

ಅಂತರ್ಜಾಲದಲ್ಲಿ ಜನಪ್ರಿಯವಾಗಿರುವ ಒಂದು ಮೈಕ್ರೋ ಕಥೆ ಅಂದರೆ ಇದು.

*ಮಗುವಿನ ಷೂ ಮಾರಟಕ್ಕಿದೆ. ಬಳಸಿಯೇ ಇಲ್ಲ.*

ಇದನ್ನು ಬರೆದಾತ ಅರ್ನೆಸ್ಟ್ ಹೆಮಿಂಗ್‌ವೇ. ಇದೊಂದು ಕಥೆಯೇ ಅಂತ ನೀವು ಹುಬ್ಬೇರಿಸಬಹುದು. ಕತೆಗೆ ಬೇಕಾದ ಕತೆಯ ಹಂದರ (plot) ಮುಖ್ಯ ಪಾತ್ರ, ಮತ್ತು ಖಳನಾಯಕ. ಈ ಎಲ್ಲ ಗುಣಗಳು ಇಲ್ಲಿವೆ.

**ಕತೆಯ ಹಂದರ:** ಈ ಕಥೆಯ ಹಂದರ ‘‘ಮಾರಾಟಕ್ಕಿದೆ. ಬಳಸಿಯೇ ಇಲ್ಲ’’ ಎಂಬ ಪದಗಳಲ್ಲಿದೆ. ಷೂಗಳನ್ನು ಮಾರಾಟ ಮಾಡುತ್ತಿರುವ ಕಾರಣವಾದರೂ ಏನು? ಬಹುಶಃ ಮಗುವಿನ ತಾಯಿ ನಿರ್ಗತಿಕಳಾಗಿ ಬೇರೆ ಮಾರ್ಗವಿಲ್ಲದೇ ಹಣಕ್ಕಾಗಿ ಷೂಗಳನ್ನು ಮಾರುತ್ತಿದ್ದಾಳೆಯೇ? ಅಥವಾ ಮಗು ಅಕಾಲ ಮರಣಕ್ಕೀಡಾಗಿ ಮಗುವಿನ ನೆನಪನ್ನು ತರುವ ಷೂಗಳನ್ನು ಆಕೆ ದೂರಮಾಡಲು ಯತ್ನಿಸುತ್ತಿದ್ದಾಳೆಯೇ? ಮಗು ಗತಿಸಿದ್ದಾದರೂ ಹೇಗೆ?

**ಮುಖ್ಯ ಪಾತ್ರ**

ಸಹಜವಾಗಿಯೇ ಕಥೆಯ ಮೊದಲ ಪದ ಮುಖ್ಯಪಾತ್ರವಾದ ಮಗುವನ್ನು ಸೂಚಿಸುತ್ತದೆ. ಆಗತಾನೆ ಹುಟ್ಟಿದ ಮಗು. ಹುಟ್ಟುತ್ತಲೇ ಜೀವನ ಸಂಗ್ರಾಮಕ್ಕಿಳಿಯಬೇಕಾದ ದಾರುಣ ಪರಿಸ್ಥಿತಿ. ಅನಂತರ ಅದರ ಸೋಲು ಮತ್ತು ಮರಣ. ಅಥವಾ ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಸಿದರು ಎಂಬ ಗಾದೆಯಂತೆ ಆಶಾವಾದಿಯಾದ ಭಾವೀ ತಾಯಿ

ಷೂಗಳನ್ನು ಖರೀದಿಸಿ ಅನಂತರ ಮದುವೆಯ ಅವಕಾಶ ಸಿಗದೇ ನಿರಾಶೆಗೊಂಡು ಷೂಗಳನ್ನು ಮಾರ ಹೊರಟಿದ್ದಾಳೆಯೇ? ಮನನ ಮಾಡಬೇಕಾದ ವಿಷಯ.

**ಖಳ ಪಾತ್ರ**

ನಿಸ್ಸಂಶಯವಾಗಿ ತಾಯಿ ಅಥವಾ ತಂದೆ ಅಥವಾ ಷೂ ಖರೀದಿಸಿದ ಯಾವುದೇ ಮನುಷ್ಯ (ಅವನು ಚಿಲ್ಲರೆ ವ್ಯಾಪಾರಿಯೂ ಆಗಿರಬಹುದು. ಆದರೆ ಅಂತಹ ಸಂದರ್ಭದಲ್ಲಿ ಮಗುವೇ ಇಲ್ಲದೇ ನಮಗೆ ಮುಖ್ಯಪಾತ್ರದ ಷಾರ್ಟೇಜ್ ಬರುತ್ತದೆ.)

ಅಂತೂ ಹೆಮಿಂಗ್‌ವೇ ಐದು ಪದಗಳಲ್ಲಿ ಒಂದು ಗಹನವಾದ ಕಥೆಯನ್ನೇ ಹೆಣೆದಿರುವುದರಲ್ಲಿ ಸಂಶಯವಿಲ್ಲ.

ಇನ್ನೊಂದು ಸಣ್ಣಾತಿಸಣ್ಣ ಕಥೆ.

***ಭೂಗ್ರಹದಮೇಲೆ ತೀವ್ರ ಧಾಳಿ. ಸರ್ವನಾಶ!***

ವಿವರಣೆ ಅನಗತ್ಯ

ಹಿಂದೊಮ್ಮೆ ಮಾನ್ಯ ಅರಾಸೇ ಅವರನ್ನು ಇದೇ ಪ್ರಶ್ನೆ ಕೇಳಿದ್ದೆ. ಅತಿ ಸಣ್ಣ ಕಥೆ ಹೇಳಿ ಅಂತ. ಅವರು, **ಒಂದೂರಿನಲ್ಲಿ ಒಬ್ಬ ಇದ್ದ.** ಅಂತ ಹೇಳಿ ಸುಮ್ಮನಾದರು. ನಾನು ''ಆಮೇಲೆ?'' ಅಂತ ಕೇಳಿದೆ. ''ಅಷ್ಟೆ ಕಥೆ. ಅವನು ಇದ್ದ ಅಂದಮೇಲೆ ಅವನ ದಾರುಣ ಜೀವನವನ್ನು ಓದುಗನೇ ತನ್ನ ಕಲ್ಪನಾ ಶಕ್ತಿಯಿಂದ ಒದಗಿಸಬಹುದು. ಅವನ ಮಗಳ ಪ್ರೇಮ ಜೀವನ, ಮಗನ ನಾಟಕವಾಡುವ ಸಂಭ್ರಮ, ಹೆಂಡತಿಯ ಆಪರೇಶನ್ ಎಲ್ಲವೂ ಒಂದು ಒಳ್ಳೆಯ ಕಥೆಯನ್ನೇ ಹೆಣೆಯುತ್ತವೆ'' ಅಂತ ಹೇಳಿ ನಕ್ಕರು.

*ನಾವು ಕಲೆ ಹಾಕಿರುವ ಸರಕನ್ನು ಓದಿ. ನಿಮ್ಮ ಪ್ರತಿಕ್ರಿಯೆ ತಿಳಿಸಿ.*

**ಶಿವಕುಮಾರ್**

---

## ಮರ್ಯಾದೆ ಪ್ರಶ್ನೆ

ಬೆಂಗಳೂರಿನ ರಸ್ತೆಯಲ್ಲಿ ಹೊಂಚು ಹಾಕುತ್ತಿದ್ದ ಇಬ್ಬರು ಕಳ್ಳರನ್ನು ಪೋಲೀಸರು ಹಿಡಿದರಂತೆ. ಮಾತಾಡಿಸಿದಾಗ ಗೊತ್ತಾದ ವಿಷಯ: ಅವರಿಬ್ಬರೂ ಬಂಗಾಳಿಗಳು. ಸರಿ ಪೋಲೀಸ್ ಸ್ಟೇಷನ್‌ಗೆ ದರದರನೆ ಎಳೆದು ಒಯ್ದರು. ಅಲ್ಲಿ ಇನ್ಸ್‌ಪೆಕ್ಟರ್ ಇವರ ಮುಖ ನೋಡಿ, 'ಹೆಸರೇನು?' ಎಂದು ಕೇಳಿದರು. 'ಬ್ಯಾನರ್ಜಿ' ಮತ್ತು 'ಚ್ಯಾಟರ್ಜಿ' ಎಂದು ಕಳ್ಳರು ಉತ್ತರಿಸಿದರು. ಇನ್ಸ್‌ಪೆಕ್ಟರ್‌ಗೆ ವಿಪರೀತ ಕೋಪ ಬಂದು ಎರಡು ಬಾರಿಸಿದರು. 'ಮಾಡೋದು ನೋಡಿದಿರೆ ಕಳ್ಳತನ, ಹೆಸರು ಕೇಳಿದರೆ ತಮಗೆ ತಾವೇ ಮರ್ಯಾದೆ ಬೇರೆ ಕೊಟ್ಟುಕೊಳ್ಳುತ್ತಾರೆ. ಜೀ ಅಂತೆ ಜೀ. ಬ್ಯಾನರ್, ಚ್ಯಾಟರ್ ಅಂತ ಹೇಳಿ' ಎಂದು ಗುಡುಗಿದರಂತೆ.

***– ಎಸ್. ಆರ್. ಆರ್.***



# ಕೊರವಂಜಿ ಅಪರಂಜಿ ಟ್ರಸ್ಟ್

ಬೆಂಗಳೂರು

ಅರ್ಪಿಸುವ

**ಬೀChiಯವರ ಜನ್ಮಶತಮಾನೋತ್ಸವದೊಂದಿಗೆ**

**18ನೇ ಹಾಸ್ಯೋತ್ಸವ**

ಮಂಗಳವಾರ 25.12.2012 ಬೆಳಗ್ಗೆ 10 ಗಂಟೆಯಿಂದ

| | | |
|---|---|---|
| ಚಾಲನೆ | : | ಹಿರಿಯ ರಂಗಕರ್ಮಿ ಡಾ. ಮಾಸ್ಟರ್ ಹಿರಣ್ಣಯ್ಯ |
| ಬೀಚಿಯವರ ನೆನಪು | : | ಗಂಗಾವತಿ ಪ್ರಾಣೇಶ್ |
| ಹಾಸ್ಯದ ಅಂಗಳದಲ್ಲಿ | : | ಪ್ರೊ. ಎಂ. ಕೃಷ್ಣೇಗೌಡ |
| ಮಾತಿನ ಚಟಾಕಿ | : | ನಾಗರಾಜ ಕೋಟೆ |
| ಈ ವರ್ಷದ ವಿಶೇಷ | : | ಚುಟುಕು ಪ್ರಶ್ನೆ ನಿಮ್ಮದು-ಗುಟುಕು ಉತ್ತರ ನಮ್ಮದು |
| ಮಾತಿನ ರಾಮಾಯಣ | : | ಆಡುವ ಮಾತನ್ನೇ ರಾಮಾಯಣವಾಗಿಸುವ ಕಲೆ |

**ಅಭಿನಂದನೆ**

**ಕೊರವಂಜಿ ಅಪರಂಜಿ ಬಳಗದ ಶ್ರೀ ಎನ್. ರಾಮಾನುಜ ಅವರಿಗೆ**

ಜೊತೆಗೆ ದಿನವಿಡೀ ಗಾನವಿನೋದಿನಿ ತಂಡದವರಿಂದ

ಹಾಸ್ಯ - ಗಾನ - ವೈವಿಧ್ಯ

ಬೀChiಯವರ ಹಾಸ್ಯ ಪುಸ್ತಕಗಳ ಬಿಡುಗಡೆ ಹಾಗೂ

ಇನ್ನಿತರ ಹಾಸ್ಯ ಪುಸ್ತಕಗಳ ರಿಯಾಯಿತಿ ಮಾರಾಟ

ನೀವು ಬನ್ನಿ - ನಿಮ್ಮ ಸ್ನೇಹಿತರನ್ನೂ - ಅಭಿಮಾನಿಗಳನ್ನೂ ಕರೆತನ್ನಿ

**ನಿಮಗೆಲ್ಲ ಆದರದ ಸ್ವಾಗತ**

**ಶ್ರೀ ಬೇಲೂರು ರಾಮಮೂರ್ತಿ**
**ಶ್ರೀ ಕೆ. ರಾಜಗೋಪಾಲ್**
ಸಂಚಾಲಕರು

**ಶ್ರೀ ಎಂ. ಶಿವಕುಮಾರ್**
ಮ್ಯಾನೇಜಿಂಗ್ ಟ್ರಸ್ಟಿ
ಕೊರವಂಜಿ ಅಪರಂಜಿ ಟ್ರಸ್ಟ್



*ಶರಲೇಖನ ಪುನರಾಗಮನ*

# ರಿಸಾರ್ಟ್‌ನಲ್ಲಿ ಒಂದು ರಾತ್ರಿ

**- ವತ್ಸನ**

**ಅ**ದೊಂದು ಹಾಲಿಡೇ ಕ್ಯಾಂಪು. ಗೆಳೆಯನೊಬ್ಬನ ಆದರಪೂರ್ಣ ಆಹ್ವಾನವನ್ನು ಮನ್ನಿಸಿ ಬಲವಂತದಿಂದ ಶರಲೇಖನನ್ನೂ ಕರೆದುಕೊಂಡು ನಾನು ಅಲ್ಲಿಗೆ ಹೋಗಿದ್ದೆ. ಆ ಹಸಿರು ತುಂಬಿ ನಳನಳಿಸುತ್ತಿದ್ದ ಪರಿಸರವನ್ನು ಶರಲೇಖ ಬಹಳ ಇಷ್ಟಪಟ್ಟ. ಕ್ಯಾಂಪಿನ ಸುತ್ತ ಇದ್ದ ದಟ್ಟವಾದ ಕಾಡುಗಳಲ್ಲಿ ನಾವು ತೃಪ್ತಿಯಾಗುವಷ್ಟು ಓಡಾಡಿದೆವು. ಸಂಜೆಯ ಹೊತ್ತಿಗೆ ಕ್ಯಾಂಪಿನ ಮಧ್ಯೆ ಇದ್ದ ಊಟದ ಹಜಾರದಲ್ಲಿ ನಮಗೆ ಊಟದ ವ್ಯವಸ್ಥೆ ಇತ್ತು. ತೆಂಗಿನ ಗರಿಗಳನ್ನು ಹೊದಿಸಿದ್ದ ಗುಂಡನೆಯ ಗುಡಿಸಲು ನಮ್ಮ ಊಟದ ಹಜಾರ. ಗೋಲ್ ಘರ್ ಎಂದು ಅದರ ಹೆಸರು. ಊಟ ಚೆನ್ನಾಗಿತ್ತು. ದಿನವೆಲ್ಲಾ ಓಡಾಡಿದ್ದರಿಂದ ನಿದ್ದೆಯೂ ಬೇಗನೆ ಬಂತು.

ರಾತ್ರಿ ಒಂದು ಹೊತ್ತಿನಲ್ಲಿ ನನಗೆ ಎಚ್ಚರವಾಯಿತು. ಕಣ್ಣು ಬಿಟ್ಟೆ . ಸುತ್ತ ಸ್ತಬ್ಧನೀರವತೆ. ಮೇಲಿನ ಗಾಢ ನೀಲ ಆಗಸದಲ್ಲಿ ಮುತ್ತು ಚೆಲ್ಲಿದಂತೆ ಅಸಂಖ್ಯಾತ ನಕ್ಷತ್ರಗಳು ಹೊಳೆಯುತ್ತಿದ್ದವು. ''ಅಬ್ಬ, ಭಗವಂತನ ಸೃಷ್ಟಿ ಅದೆಷ್ಟು ಅದ್ಭುತ'' ಎಂಬ ಉದ್ಗಾರ ನನಗರಿವಿಲ್ಲದೆಯೇ ನನ್ನ ಬಾಯಿಂದ ಹೊರಹೊಮ್ಮಿತು. ಹತ್ತಿರದಲ್ಲೇ ಮಲಗಿದ್ದ ಶರಲೇಖ, ''ಹೌದು, ನಿಜಕ್ಕೂ ಈ ನಕ್ಷತ್ರ ರಾಶಿಯನ್ನು ನೋಡುತ್ತಿದ್ದರೆ ನಮ್ಮ ಭೂಲೋಕದಂತಹ ಸಾವಿರಾರು ಲೋಕಗಳು ನಮ್ಮ ಮುಂದಿರುವ ದೃಶ್ಯದಲ್ಲಿ ಹುದುಗಿರಬಹುದು. ಹೇಗಿದ್ದರೂ ಎದ್ದಿದ್ದೀಯ. ನಿನ್ನ ಮುಂದಿರುವ ದೃಶ್ಯವನ್ನು ಚೆನ್ನಾಗಿ ಪರಿಶೀಲಿಸಿ ವಿವರಿಸು ನೋಡೋಣ'' ಎಂದ ಶರಲೇಖ. ನಾನು ಗಾಢ ನೀಲಿ ಬಣ್ಣದ ಆಕಾಶವನ್ನು ಕೂಲಂಕುಷವಾಗಿ ಪರಿಶೀಲಿಸ ತೊಡಗಿದೆ. ಒರಾಯನ್ ನಕ್ಷತ್ರ ಗುಚ್ಛ ನೇರವಾಗಿ ಮೇಲಿತ್ತು. ಸ್ವಲ್ಪ ಪಕ್ಕಕ್ಕೆ ಸಪ್ತರ್ಷಿ ಮಂಡಲ ಕಾಣುತ್ತಿತ್ತು. ನನ್ನ ಖಗೋಳ ಜ್ಞಾನ ಅಷ್ಟಕ್ಕಷ್ಟೆ. ಹಾಗಾಗಿ ಇವೆರಡನ್ನು ಬಿಟ್ಟರೆ ಇನ್ನಾವ ನಕ್ಷತ್ರ ಅಥವಾ ಗ್ರಹವನ್ನು ಗುರುತಿಸುವ ಸ್ಥಿತಿಯಲ್ಲಿ ನಾನಿರಲಿಲ್ಲ. ನಾನು ನೋಡಿದಷ್ಟನ್ನು ಶರಲೇಖನಿಗೆ ತಿಳಿಸಿದೆ. ಅವನು ನನ್ನ ಮಾತನ್ನು ಸಾವಧಾನವಾಗಿ ಕೇಳಿಸಿಕೊಂಡು, ''ಪರಿಶೀಲನೆ ಮುಗಿಯಿತು. ಈಗ ನಿನ್ನ ನಿರ್ಣಯಗಳೇನು ತಿಳಿಸು?'' ಅಂತ ಕೇಳಿದ. ನಾನು, ''ನಿರ್ಣಯ? ಮೋಡಗಳಿಲ್ಲದ ಆಕಾಶ. ಮೆಲ್ಲನೆ ಹಿತವಾಗಿ ಬೀಸುತ್ತಿರುವ ಗಾಳಿ. ಸರಿರಾತ್ರಿಯಾದುದರಿಂದ ಪ್ರಾಣಿ ಪಕ್ಷಿಗಳು ನಿದ್ರಿಸುತ್ತಿವೆ. ಇಷ್ಟು ಬಿಟ್ಟರೆ ಇನ್ನು ಯಾವ ನಿರ್ಣಯಗಳೂ ನನಗೆ ತೋಚುತಿಲ್ಲಪ್ಪಾ'' ಅಂತ ಹೇಳಿದೆ.

ಶರಲೇಖ ಜೋರಾಗಿ ನಗುತ್ತಾ, ''ಅಯ್ಯೋ ಪೆದ್ದು ಮುಂಡೇದೇ, ನಾವು ಮಲಗಿದ್ದಾಗ ನಮ್ಮ ಟೆಂಟನ್ನೇ ಯಾರೋ ದುರಾತ್ಮರು ಕದ್ದುಗೊಂಡು ಹೋಗಿದ್ದಾರಲ್ಲೋ. ಅದನ್ನೂ ಗಮನಿಸಲಿಲ್ಲವೇ?'' ಅಂತ ನಗಾಡಿದ.

✵



# ಇನ್ನೊಂದು ಪ್ರಳಯ ಬೇಕಾ?

**- ಇ.ಆರ್. ರಾಮಚಂದ್ರನ್**

**ಅ**ಜ್ಜಿ ಟಿವಿಯನ್ನು ನೋಡುತ್ತಿದ್ದವರು 'ಏನೋ ಇದು' ಅಂತ ಉದ್ಗಾರ ತೆಗೆದರು.

'ಏನಾಯಿತಜ್ಜೀ! ಏನು ಪ್ರಾಬ್ಲಂ?'

'ಟೀವೀಲಿ ದಿನಾ ಮುಂದಿನ ತಿಂಗಳು ಬರುವ ಪ್ರಳಯದ ವಿಷಯಾನೇ ತೋರಿಸ್ತಿದಾರೇ!'

'ಅಜ್ಜಿ! ಈ ಛಾನೆಲ್ ನವರಿಗೆ ಟಿಆರ್‌ಪಿ ಬೇಕು. ಅದಕ್ಕೋಸ್ಕರ ಏನು ಬೇಕಾದ್ರೂ ಹಾಕ್ತಾರೆ! ನಿನಗೇನನ್ನುತ್ತೆ ಅಜ್ಜಿ? ನಿಜವಾಗಿ ಪ್ರಳಯ ಬರುತ್ತಾ?'

> **''ನಮ್ಮ ದೇಶದ ಸ್ಥಿತಿ ನೋಡಿ ಪ್ರಳಯ ಕೂಡ ಹೆದರಿ ಸುಸ್ತಾಗಿ ಠುಸ್ ಆಗಿಬಿಡುತ್ತೆ''**

'ಅಯ್ಯೋ ಪೆದ್ದೇ! ಈಗ ಒಂದು ವರ್ಷದಿಂದ ಆಗ್ತಿರೋದು ಪ್ರಳಯವಲ್ದೇ ಮತ್ತೇನು?'

'ಸ್ವಲ್ಪ ವಿವರವಾಗಿ ಹೇಳಜ್ಜಿ.'

'ನಮ್ದೇಶದಲ್ಲಿ ನಡೀತಿರೋದನ್ನೇ ನೋಡು. ಕೋಟ್ಯಾನು ರೂಪಾಯಿ ಖರ್ಚುಮಾಡಿ ನೀರಾವರಿ ಮಾಡಿ ಕಾಲುವೆ ತೋಡೋ ಬದ್ಲು ಆ ದುಡ್ನ ಮಿನಿಸ್ಟರ್ನಿಂದ ಹಿಡಿದು ಕಂಟ್ರಾಕ್ಟರ್ಗಳು ತಿಂದ್ಹಾಕೀದಾರೆ... ರೈತರ ಜಮೀನಿಗೆ ಹೋಗಬೇಕಾಗಿದ್ದ ನೀರನ್ನೆಲ್ಲಾ ಪುಢಾರಿಗಳ ಫ್ಯಾಕ್ಟರಿಗೆ ಹರಿಯೋಹಾಗೆ ಮಾಡ್ಕೊಂಡಿದಾರೆ. ಅಲ್ಲೇ ಇರೋ ರೈತರು ನೀರಿಲ್ದೆ ಸೂಯಿಸೈಡು ಮಾಡ್ಕೊತಿದಾರೆ..... ಇದು ಪ್ರಳಯ ಅಲ್ದೆ ಮತ್ತೇನು?'

'ಪ್ರಳಯ ಅಂದ್ರೆ ನೀರು ಬಂದು ಎಲ್ಲಾ ಕೊಚ್ಚಿಕೊಂಡು ಹೋಗುತ್ತಲ್ಲಾ ಅಜ್ಜಿ!'

'ಈಗಾಗ್ತಿರೋದು ನೀರಿಲ್ಲದ ಕ್ರೌರ್ಯ! ಹೀಗೇ ಆದ್ರೆ ಒಂದು ದಿನ ಎಲ್ಲಾ ಕೊಚ್ಚಿಕೊಂಡು ಹೋಗುತ್ತೆ! ಕಾರ್ಗಿಲ್ ಯುದ್ಧದಲ್ಲಿ ಕೈಕಾಲು ಮುರ್ಕೊಂಡು ದೇಶಾನ ಕಾಪಾಡಿದ ಯೋಧರಿಗೆ ಮೀಸಲಾಗಿಟ್ಟಿದ್ದ ಜಾಗದಲ್ಲಿ ಮಿನಿಸ್ಟ್ರುಗಳು, ಸೆಕ್ರೆಟರಿಗಳು ಅಪಾರ್ಟ್‌ಮೆಂಟ್ ಕಟ್ಕೋತಾ ಇದಾರೆ! ರಿಟೈರ್ಡ್ ಮಿಲಿಟರಿಯವರನ್ನ ಅಲ್ಲಿ ವಾಚ್ಮನ್ನಾಗಿ ಇಟ್ಕೋತಾರೆ! 'ಕೋತಿ ಮೊಸರನ್ನ ತಿಂದು ಮೇಕೆ ಬಾಯಿಗೆ ಒರಸಿದ ಹಾಗೆ' ಅವರ ಹೆಸರಿಟ್ಟು ಇವರು ಮಜಾ ಮಾಡೋದು... ಈ ಮೋಸಕ್ಕಿಂತ ಇನ್ಯಾವ ಪ್ರಳಯ ಬೇಕೋ?'

'ಹ ಹ ಅಜ್ಜಿ.'

'ಇನ್ನೊಬ್ಬ ರಾಜಕಾರಿಣಿ ತನ್ನ ಡ್ರೈವರ್, ಅಡುಗೆ ಭಟ್ಟ, ನಾಯಿ ಮರಿ, ಜ್ಯೋತಿಷಿಯನ್ನು ಡೈರೆಕ್ಟರ್‌ಗಳನ್ನಾಗಿ ಮಾಡಿ ಕೈ ತುಂಬ ಬೊಗಸೆ ಕಂಪನಿಗಳನ್ನು ಶುರು ಮಾಡಿ ಬ್ಯಾಂಕುಗಳಿಂದ ಸಿಕ್ಕಾಪಟ್ಟೆ ದುಡ್ಡು ತೊಗೊಂಡಿದಾನಂತಲ್ಲೋ!'

'ಅಜ್ಜಿ, ಅದು ಬೊಗಸೆ ಸರೀ.. ಬೋಗಸ್ ಕೂಡ.'

‘ಮೋಸದ್ದೇನೋ.. ಮನೇಹಾಳಾ!’

‘ಹೌದಜ್ಜಿ.’

‘ನಾವು ಈ ಮನೆ ಕಟ್ಟುವಾಗ ಬ್ಯಾಂಕ್ನಿಂದ ಲೋನ್ ತೊಗೋಳಕ್ಕೆ ಹತ್ತು ಪೇಜು ಅಪ್ಲಿಕೇಷನ್ ತುಂಬಿ, ಗ್ಯಾರಂಟಿ ಕೊಡೋದಕ್ಕೆ ಗೋರಂಟಿ ಸೊಪ್ಪು ಹುಡುಕಿದ ತರಹ ಅಲ್ಲಿ ಇಲ್ಲಿ ಹುಡಿಕಿ ಯಾರ ಕೈಲೋ ಸೈನ್ ಮಾಡಿಸಕ್ಕೆ ಊರೂ ಕೇರೀ ಅಲೆದ್ವಿ. ಈಗ ಅದೇನೂ ಇಲ್ದೆ ಕೋಟಿಗಟ್ಟಲೆ ಸಾಲ ಕೊಡ್ತಾರಂತಲ್ಲೋ.. ಬಡ್ಡೀನೂ ಇಲ್ವಂತೆ! ಮೊನ್ನೆ ನಮ್ಮ ಸಾಫ್ಟ್‌ವೇರ್ ಸೀತಮ್ಮ ಹೇಳ್ತಿದ್ದರು ಪುರಾಣದ ಮಧ್ಯೆ.’

‘ನಿನಗೆ ಬೇಡದಿದ್ರೂ ಮನೇಗೆ ಬಂದು ದಮ್ಮಯ್ಯಾ ತೊಗೋ ಅಂತ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರೇ ಬರ್ತಾನೆ! ಅದಕ್ಕೆ ನಿನ್ನ ಅಳಿಯ ದೊಡ್ಡ ಕುಳ ಆಗಿರ್ಬೇಕು.’

‘ನಮಗೆ ಗೊತ್ತೀರೋ ‘ಅಳಿಯಂದ್ರೆಲ್ಲಾ ಅಳಿಯ ಮನೆ ತೊಳಿಯ!’ ಯಾವ ಬ್ಯಾಂಕೋ ಅದು?’

‘ನೀನು ರಾಜಮಾತೆಯಾದ್ರೆ ಯಾವ ಬ್ಯಾಂಕೂ ಬೇಡ. ಯಾರಾದ್ರೂ ಮನೇಗೇ ಓಡ್ಬಂದು ತಂದು ಕೊಡ್ತಾರೆ!’

‘ನಾನು ಅದಕ್ಕೇ ಹೇಳಿದ್ದು.... ಇದೆಲ್ಲಾ ಆಗ್ತಿರೋವಾಗ ಬೇರೆ ಪ್ರಳಯ ಯಾತಕ್ಕೆ ಬೇಕು? ಮೊನ್ನೆ ಅರವಿಂದ್ ಕೇಜ್ರಿವಾಲ್ ಹೇಳ್ತಿದ್ದ ನೋಡು, ಕೊಳ್ತು ಹೋಗೋ ಅಷ್ಟಿರೋ ಕಪ್ಪು ಹಣಾನ ಹೊರಗಡೆ ಸ್ವಿಡ್ಜರ್ಲ್ಯಾಂಡ್ ಬ್ಯಾಂಕ್ಗಳಲ್ಲಿ ನಮ್ಮವ್ರೇ ಶೇಖರಿಸಿಟ್ಟಿದ್ದಾರಂತೆ. ಆ ಭಾರಕ್ಕೆ ಅವರ ದೇಶವೇ ಮುಳುಗಿಹೋಗುತ್ತೋ ಅಂತ ಹೆದರಿದ್ದಾರೆ ಅಲ್ಲಿಯವರು! ಅದನ್ನು ವಾಪಸ್ಸು ತರುವ ಯೋಚನೆಯೇ ಇಲ್ಲ ನಮ್ಮ ಸರ್ಕಾರಕ್ಕೆ.’

‘ನಿಜ ಅಜ್ಜಿ’

‘ಟನ್ನುಗಟ್ಲೆ ಬಿದ್ದಿರೋ ದುಡ್ಡನ್ನ ಬರೀ ಒಂದು ಅರವತ್ತು ಕೆ.ಜಿ. ಇರೋ ಕೇಜ್ರಿವಾಲ್ ಹ್ಯಾಗೆ ತರ್ತಾನೋ ನೊಡ್ಬೇಕು!’

‘ಹ ಹ ಅಜ್ಜಿ’

‘ಇಷ್ಟೆಲ್ಲಾ ಕಭಡ, ಕೊಳಚೆ ತುಂಬಿ ತುಳುಕಾಡ್ತಿರೋ ದೇಶಕ್ಕೆ ಪ್ರಳಯ ಏನ್ಮಾಡುತ್ತೋ.. ನಮ್ಮ ಬೆಂಗ್ಳೂರಿನಲ್ಲಿ ಪರ್ವತವಾಗಿರೋ ಗಾರ್ಬೇಜು ನೋಡಿ ಇಷ್ಟು ಜನಕ್ಕೆ ಹೇಗೆ ಅಟ್ಯಾಕ್ ಮಾಡೋದು ಅಂತ ಡೆಂಗ್ಯು, ಮಲೇರಿಯಾ ಕೂಡ ಹೆದರಿ ಓಡ್ಹೋಗುತ್ತೆ! ಸೊಳ್ಳೆಕೂಡ ಎಷ್ಟೊಂತ ಕಚ್ಚಕ್ಕೆ ಸಾಧ್ಯ? ಸಿಕ್ಕಾಪಟ್ಟೆ ರಕ್ತ ಕುಡಿದು ಅಜೀರ್ಣವಾಗಿ ರಕ್ತ ಭೇದಿಯಾದರೆ ಏನು ಗತಿ! ಹಾಗೇ ನಮ್ಮ ದೇಶದ ಸ್ಥಿತಿ ನೋಡಿ ಪ್ರಳಯ ಕೂಡ ಹೆದರಿ ಸುಸ್ತಾಗಿ ಠುಸ್ ಆಗಿಬಿಡುತ್ತೆ ನೋಡ್ಕೋ!’

‘ಅಜ್ಜಿ.. ಮಾತೇ ಇಲ್ಲ ನಿನ್ನ ಈ ಮಾತಿಗೆ.. ಲಾ ಜವಾಬ್ ನಹಿ..’

✵



# ಪ್ರಳಯ ತಪ್ಪಿಸಿಕೊಳ್ಳಲೊಂದು ಪ್ರಳಯಾಂತಕ ಐಡಿಯಾ!

**- ತುರುವೇಕೆರೆ ಪ್ರಸಾದ್**

**ಈ** ಪ್ರಳಯದಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂದು ಪ್ಲಾನ್ ಮಾಡುತ್ತಿದ್ದೇನೆ. ಅದಕ್ಕಾಗಿ ತಾಯತ ಕಟ್ಟಿಕೊಂಡು ಹೋಮ, ಹವನ, ನವಗ್ರಹ ಜಪ ಮಾಡುವ ಬದಲು ಬೇರೆ ಒಂದು ಐಡಿಯಾ ಹಾಕಿದ್ದೇನೆ. ಮೊದಲು ಒಂದು ಹ್ಯಾಮ್ ರೇಡಿಯೋ ಸೆಟ್ ತಗೋಬೇಕು. ಯಾವುದಾದರೂ ತರಂಗಾಂತರದಲ್ಲಿ ಅನ್ಯಗ್ರಹದ ಯಾವುದಾದರೂ ಸಂಕೇತ ಬಂದೀತೇನೋ ಎಂಬ ದೂರದಾಸೆ ಇದೆ. ಅಂತಹದೊಂದು ಸಂಕೇತ ಬಂದಲ್ಲಿ ಎಲ್ಲಾ ಆರಕ್ಕೆ ಮೂರರಂತೆ ಮಾರಿ ಕೂಡಿಟ್ಟ ದುಡ್ಡಿನೊಂದಿಗೆ ಸಿಟಿ ಮಾರ್ಕೆಟ್ ಬಸ್ ಹಿಡಿಯಲು ಓಡುವವನಂತೆ ಓಡಿಬಿಡುತ್ತೇನೆ. ಎಲ್ಲಿಗೆ ಗೊತ್ತಾ? ಯಾವುದಾದರೂ ದೇವಸ್ಥಾನಕ್ಕೆ ಪಾರಾಯಣ ಮಾಡಲಲ್ಲ. ಅದೇ ಸ್ವಾಮಿ ಆ ಯುಎಫ್‌ಓ (ಹಾರುವ ತಟ್ಟೆ) ಬಂದಿತ್ತಂತಲ್ಲ — ನ್ಯೂಜಿಲೆಂಡ್, ಬ್ರಿಟನ್‌ನ ಆ ಜಾಗಕ್ಕೆ. ಅಕಸ್ಮಾತ್ ಮತ್ತೆ ಅದೇನಾದರೂ ಆ ಕಡೆ ಬಂದರೆ, ಕೈ ತೋರಿಸಿದಾಗ ಒಂದು ರಿಕ್ವೆಸ್ಟ್ ಸ್ಟಾಪ್ ಕೊಟ್ಟರೆ ಹತ್ತಿಕೊಂಡು ಯಾವುದಾದರೂ ಹೊಸ ಗ್ರಹಕ್ಕೆ ಹೊರಟು ಹೋಗುವುದು ಎಂದು ಪ್ಲಾನ್ ಹಾಕಿದ್ದೇನೆ. ಇನ್ನು ನನ್ನ ಪಡಿತರ ಚೀಟಿ ಹಾಗೂ ಆಧಾರ್ ಕಾರ್ಡ್‌ಗಳನ್ನು ಹಾಗೂ ಸಾಧ್ಯವಾದಷ್ಟು ಸಾಹಿತ್ಯ ಕೃತಿಗಳನ್ನು ಯಾವುದಾದರೂ ಪ್ಲಾಸ್ಟಿಕ್ ಕಂಟೈನರ್‌ನಲ್ಲಿ ಹಾಕಿ ಸೀಲು ಮಾಡಿಬಿಡಬೇಕು. ಎಂಥಹ ಪ್ರಳಯವೇ ಆದರೂ, ಜಪ್ಪಯ್ಯ ಎಂದರೂ ಪ್ಲಾಸ್ಟಿಕ್ ಕೊಳೆಯುವುದಿಲ್ಲ, ಮಣ್ಣಲ್ಲಿ ಮಣ್ಣಾಗುವುದಿಲ್ಲ. ಹಾಗಾಗಿ ಈ ಪ್ಲಾಸ್ಟಿಕ್ ಪಳಿಯುಳಿಕೆ ಎಲ್ಲೋ ಒಂದು ಕಡೆ ನನ್ನ ಅಸ್ತಿತ್ವದ ಕುರುಹಾಗಿ ಇದ್ದೇ ಇರುತ್ತದೆ.

**ಪ್ರಳಯದಿಂದ ತಪ್ಪಿಸಿಕೊಂಡರೆ ನನಗೆ ನಾನೇ ಎಲ್ಲ, ನನಗೇ ಇರುವುದೆಲ್ಲಾ!**


ಪ್ರಳಯದಿಂದ ಪಾರಾಗಲು ಇನ್ನು ಒಂದು ಛಾನ್ಸಿದೆ. ಆ ಬಗ್ಗೆಯೂ ನಾನು ಯೋಚಿಸುತ್ತಿರುವೆ. ಮೊನ್ನೆ ಒಬ್ಬರು ಹೆಂಗಸು ತಾನು ವಿಜ್ಞಾನಿ ಎಂದು ಹೇಳಿಕೊಂಡು ಐಐಎಸ್‌ಸಿ ಒಳಗೆ ಜಾಂಡಾ ಹೊಡೆದಿತ್ತಿಲ್ಲವಾ? ಅದೇ ತರ ನಾನೂ ಒಬ್ಬ ವಿಜ್ಞಾನಿ ಎಂದು ಎಲ್ಲಾದರೂ ತೂರಿಕೊಂಡು ಯಾವುದಾದರೂ ಉಪಗ್ರಹದಲ್ಲಿ ಜಾಗ ಗಿಟ್ಟಿಸಿ ಬಾಹ್ಯಾಕಾಶ ನಿಲ್ದಾಣಕ್ಕೆ ಹೋಗಿ ಒಂದಾರು ತಿಂಗಳು ಹಾಯಾಗಿ ತೇಲಾಡಿಕೊಂಡಿರುವುದು. ಆಮೇಲೆ ವಾಪಸ್ ಬರುವುದು. ಹಾಳೂರಿಗೆ ಉಳಿದವನೇ ಗೌಡ ಎನ್ನುವಂತೆ ಈ ಚಿಂದಿ, ಚಿತ್ರಾನ್ನವಾದ ಭೂಮಿಗೆ ಬೆರಳೆಣಿಕೆಯ ನನ್ನಂತಹವರೇ ಪಾಳೇಗಾರರು. ಈ ನೈಸರ್ಗಿಕ ಸಂಪತ್ತು, ಗಣಿ, ಬೆಟ್ಟ, ಗುಡ್ಡ, ಪರ್ವತ, ಸಾಗರ ಎಲ್ಲದಕ್ಕೂ ನಾವೇ ಒಡೆಯರು. ಯಾರಿಗುಂಟು ಯಾರಿಗಿಲ್ಲ,

ಯಾವ ಲೋಕಾಯುಕ್ತ, ಸಿಬಿಐ ಇರುವುದಿಲ್ಲ, ಯಾರಿಗೂ ಕ್ಯಾರೇ ಅನ್ನೋ ಗೋಜಿಲ್ಲ, ಉಪ್ಪಿ ಹೇಳುವಂತೆ ನನಗೆ ನಾನೇ ಎಲ್ಲ, ನನಗೇ ಇರುವುದೆಲ್ಲಾ!

ಇದಕ್ಕೂ ಮೀರಿದ್ದೆಂದರೆ ಚಂದ್ರಲೋಕ, ಮಂಗಳ ಲೋಕದ ಯಾನಗಳಿಗೆ ಬುಕ್ ಮಾಡುವುದು. ಭಾರತದ ಮುಂದಿನ ಚಂದ್ರಯಾನ ಟೂ ಲೇಟ್ ಅನಿಸುತ್ತೆ. ಅದಕ್ಕೇ ಯಾವುದಾದರೂ ಫಾರಿನ್ ಪ್ಯಾಕೇಜ್‌ಗೆ ಜಾಯಿನ್ ಆದರೆ ಕನಿಷ್ಠ ಬಾಹ್ಯಾಕಾಶ ಕೇಂದ್ರದಲ್ಲಿ ಇಳಿದುಕೊಂಡು ಚಂದ್ರಯಾನಕ್ಕೆಂದು ಬರುವ ಯಾವುದಾದರೊಂದು ಫಾರಿನ್ ಉಪಗ್ರಹ ಕ್ಯಾಚ್ ಮಾಡಿದರಾಯ್ತು. ಅಲ್ಲಿಂದ ಹೇಗಾದರೂ ಪ್ಲಾನೆಟ್ ಎಕ್ಸ್‌ಗೆ ಹೋಗಿಬಿಡುವುದು. ಅಲ್ಲಿ ಮನುಷ್ಯ ಬದುಕಬಹುದಂತೆ. ನೀರಿನ ಜೊತೆಗೆ ಪಾದರಸದಂತಹ ವಸ್ತುವೊಂದಿದ್ದು ಅದನ್ನು ಇಂಧನವಾಗಿ ಬಳಸಬಹುದಂತೆ. ಇನ್ನೇನು ಬೇಕು ಹೇಳಿ?

ಅದಕ್ಕೂ ಮುಂಚೆ ಯಾವುದಾದರೂ ಒಬ್ಬ ವಿಜ್ಞಾನಿಯನ್ನು ಬ್ಲಾಕ್‌ಮೇಲ್ ಮಾಡಿ ನನ್ನ ಡಿಎನ್‌ಎ, ತಳಿನಕ್ಷೆ, ರಕ್ತಮಾದರಿ ಇತರೆ ಎಲ್ಲಾ ಜೀವ ಸ್ರಾವಗಳನ್ನು ಒಂದು ಬಾಟಲ್‌ಗೆ ಹಾಕಿ ಹೇಗಾದರೂ ಅಂಟಾರ್ಟಿಕಾಗೆ ಹೋಗಿ ಅಲ್ಲಿ ಆಳ ಮಂಜುಗಡ್ಡೆಯೊಳಗೆ ಹೂತು ಬಿಡಬೇಕು. ಎಷ್ಟೋ ಕೋಟಿ ವರ್ಷಗಳ ನಂತರ ಮತ್ತೆ ಜೀವದ ಪುನುರುತ್ಥಾನವಾಗಬಹುದಾದ ಸಂದರ್ಭದಲ್ಲಿ ಯಾರಾದರೊಬ್ಬ ವಿಜ್ಞಾನಿ ಉತ್ಕನನ ಮಾಡುವಾಗ ಈ ಬಾಟಲ್ ಸಿಕ್ಕಿದರೆ ಅದರೊಳಗಿನ ಜೀವದ್ರವಗಳನ್ನು ತೆಗೆದು ಯಾವುದಾದರೊಂದು ಪ್ರಯೋಗ ಶಾಲೆಯಲ್ಲಿ ನನ್ನ ಮರುಸೃಷ್ಟಿ ಮಾಡಬಹುದು. ಆಗ ನಾನು ಆ ಹೊಸ ಭೂಮಿ ಅಥವಾ ಬ್ರಹ್ಮಾಂಡದ ಮೊದಲ ಜೀವಿ ಆಗುವ ಹೆಗ್ಗಳಿಕೆಗೆ ಪಾತ್ರನಾಗುವೆ. ಹಾಗೇ ನನ್ನ ಹೆಂಡತಿಯನ್ನೂ ಇದಕ್ಕೆ ಒಪ್ಪಿಸಿ ಆಡಂ ಅಂಡ್ ಈವ್ ಜೋಡಿಯಾಗಿ ಮತ್ತೊಂದು ಮನುಕುಲದ ಸೃಷ್ಟಿಗೆ ನಾಂದಿ ಹಾಡಬೇಕೆಂಬ ಆಸೆಯಿದೆ. ಏಳೇಳು ಜನ್ಮಕ್ಕೂ ನನ್ನ ಗಂಡ ನೀನೇ ಆಗು ಎನ್ನುವವರ ಪೈಕಿ ನನ್ನ ಹೆಂಡತಿಯೂ ಒಬ್ಬಳು ಎನ್ನುವ ನಂಬಿಕೆ ನನಗಿದೆ. ಏಕೆಂದರೆ ಒಂದು ಜನ್ಮದಲ್ಲಿ ಪಳಗಿಸಿದ ಗಂಡನನ್ನ ನಾಯಿಯಂತೆ ಸಾಕಿಕೊಂಡಿರುವುದು ಬಿಟ್ಟು ಪ್ರತಿಜನ್ಮದಲ್ಲೂ ಹೊಸ ಗಂಡನನ್ನು ಪಳಗಿಸುವ ಗ್ರಹಚಾರ ಯಾಕೆ ಬೇಕು ಹೇಳಿ? ಆದರೆ ಪ್ರಳಯಕ್ಕೆ ಮುಂಚೆ ನನ್ನ ಹೆಂಡತಿ ಮೇಕಪ್ ಮಾಡಿಕೊಂಡು ಸರಸರ ನನ್ನೊಂದಿಗೆ ಹೊರಡಬೇಕಲ್ಲ ಸ್ವಾಮಿ?

✵



ಈ ಬಾರಿ ದಸರಾ ಮೆರವಣಿಗೆ ನೋಡಲು ಮಾಡಿಕೊಂಡಿದ್ದ ವ್ಯವಸ್ಥೆ



# ಎಳ್ಳಾಮಾಸಿ ಸಂಭ್ರಮ

**- ಭೂಮಿತಾಯಿ**

**ಚ**ಳಿಗಾಲ ಬಂದ್ರ ಸಾಕು, ಒಡದ ಚರ್ಮಕ್ಕ ಎಣ್ಣಿ ಹಚ್ಕೊಂಡು, ಬಿಸಿ ನೀರಿನ ಸ್ನಾನ ಮಾಡುವ ಸುಖಕ್ಕಿಂತ ಮಿಗಿಲಾಗಿದ್ದು ಏನರೆ ಇದ್ರ, ಅದು ಹೊಲ್ದಾಗ ಕುಂತು ಸೀತನಿ ತಿನ್ನೂದ ಇರಬೇಕು.

> **ಬದುಕೂದನ್ನು ಆಸ್ವಾದಿಸೂದು, ಆಚರಿಸೂದು ಹೇಳಿ ಕೊಡೂದ್ರಿಂದ ಚಳಿಗಾಲ ಭಾಳ ಆಪ್ತವಾಗಿ ಬಿಡ್ತದ.**

ಕಾಳು ತೆನಿಗಟ್ಟಿ, ಬಲಿಯೂಮುಂದ ಹಾಲುತುಂಬಿರ್ತಾವ. ಇವನ್ನ ಸುಟ್ಟು, ಸುಡುಸುಡು ತೆನಿ ಅಂಗೈಯ್ಯಾಗ ಹೊಸದು ಬಾಯಾಗ ಹಾಕ್ಕೊಂಡ್ರ ಆಹಹಾ ಜೊತಿಗೆ ಸೇಂಗಾ ಹಿಂಡಿ, ಕಬ್ಬಿನ ಹಾಲು, ಹಾಲ್ಕೆನಿಯ ಬೆಲ್ಲ ಇದ್ರಂತೂ ಮುಗಿದೇ ಹೋತು. ಚಳಿನೂ ನೆನಪಾಗುದಿಲ್ಲ, ಥಂಡಿಗಾಳಿ ಮೈ ಸೋಕಿ, ಕೊರದ್ರೂ ಒಂಥರಾ ಮಜಾನೆ ಅನ್ನಸ್ತದ.

ಡಿಸೆಂಬರ್‌ನಾಗ ಎಳ್ಳಾಮಾಸಿ ಬಂದ್ರ, ಎಲ್ಲಾರಿಗೂ ತಮ್ಮ ತಮ್ಮ ಹೊಲಕ್ಕ ಮಂದೀಗೆ ಬಂಡಿ ಕಟ್ಗೊಂಡು ಕರ್ಕೊಂಡು ಹೋಗ ಹುಕಿ ಬಂದಿರ್ತದ.

ಎಳ್ಳ ಹಚ್ಚಿದ ಸಜ್ಜಿರೊಟ್ಟಿ, ಬಿಳಿಜೊಳದ ರೊಟ್ಟಿ, ದಪಾಟಿ, ಎಣ್ಣೆಗಾಯಿ ಝುಣಕಾ ಮಾಡ್ಕೊಂಡು ಹೋಗ್ತಾರ. ಇದರ ಜೋಡಿ, ಹೈದರಾಬಾದ್ ಕರ್ನಾಟಕದಾಗ ‘ಬಜ್ಜಿ’ ಅಂತ ಕರಿಯೂ ಪಲ್ಯನೂ ಕಟ್ಗೊತಾರ. ಎಲ್ಲಾ ಹೊಸ ಹಸಿಕಾಳುಗಳಿಗೆ ಎಲ್ಲ ಸೊಪ್ಪು ಹಾಕಿ, ಬ್ಯಾಳಿಗೆ ಸೇರಿಸಿ, ಕಡಲಿ ಹಿಟ್ಟು, ಹುಣಸೀರಸ ಹಾಕಿ ಮಾಡುವ ಪಲ್ಯ ಅದು. ಚಳಿಗಾಲದೊಳಗ ಎಣ್ಣೀಕಾಳು ತಿನ್ನಬೇಕಂತ. ಅದಕ್ಕಿಷ್ಟು ರುಚಿ ಮಾಡ್ಕೊಂಡು ತಿನ್ನೂದನ್ನ ಅವರಿಂದಲೇ ಕಲೀಬೇಕು.

ಸೀತನಿ ಸುಲಗಾಯಿ ಜೋಡಿ ಅಗ್ದಿ ನಮ್ಮ ಐಶ್ ಮತ್ತು ಅಭಿ ಜೋಡಿ ಇದ್ದಂಗ. ಸುಟ್ಟ ಸೀತನಿ ಜೊತಿಗೆ ಹಸಿ ಸುಲಗಾಯಿ ತಿನ್ನೂಮುಂದ ಎಳೀ ಕಡಲಿಗಿಡದ ಎಲಿಯ ಹುಳಿಯೊಗರ ಸೈತ ರುಚಿ ಅನ್ನಸ್ತದ.

ಬಯಲುಸೀಮಿಯೊಳಗಿನ ಚಳಿಗಾಲ ಅಂದ್ರ ಬರೀ ನಾಲಗಿ ಚಪಲ ತೀರಿಸುವ ಕಾಲ ಇದು. ಥಣ್ಣಗ ಥಂಡಿಗಾಳಿ ಕಿವಿಗೆ ಅಪ್ಪಳಸೂ ಮುಂದ, ಮಿರ್ಚಿಭಜಿ ಕರಿಯೂ ಗಾಡಿ ಮುಂದ ಮಂದಿ ಸಾಲುಗಟ್ಟಿ ನಿಂತಿರ್ತಾರ. ಬಿಸೀ ಬಜ್ಜಿಯೊಳಗಿನ ಹೊಗಿ, ಖಾರದ ಮೆಣಸಿನಕಾಯಿ ಎರಡೂ ಕೂಡಿ ಊದಿಊದಿ ತಿನ್ನೂಮುಂದ, ಮಂದಿ ಮೂಗು, ಕಣ್ಣು ಕಿವಿಯೊಳಗಿನಿಂದ ಹೊಗಿ ಬಂದಂಗ ಆಗ್ತದ.

ಚಳಿಗಾಲದ ಮಜಾನ ಹಂಗ ನೋಡ್ರಿ. ಎಳ್ಳಾಮಾಸಿ ಸಂಭ್ರಮ ಹೇಳಾಕ ಹೋಗಿ, ಬಾಯಿ ಸುಟ್ಗೊಳ್ಳು, ಕೈ ಸುಟ್ಗೊಳ್ಳು ಸುದ್ದಿಗೆ ಬಂದ್ವಿ.

ಎಳ್ಳಾಮಾಸಿಗೆ ಎಳ್ಳಿನಷ್ಟ ಬಿಸಿಲು ಅಂತ ಹೇಳ್ತಾರ. ಇಷ್ಟ ಬಿಸಿಲಿನಾಗ ಮೈಮನಸು ಪ್ರಫುಲ್ಲಗೊಳಿಸುವ ಆಚರಣೆಗಳು ಇವು. ಹೊಲ ಇಲ್ಲದವರು, ಹಳ್ಳಿ ಬಿಟ್ಟು ಊರಿಗೆ ಬಂದು ಸೇರಿದವರು ಎಲ್ಲಾರು ಅವತ್ತ ನಗರದೊಳಗಿನ ಪಾರ್ಕು ಹುಡುಕಿಕೊಂಡು ಹೋಗ್ತಾರ. ಬುತ್ತಿ ರೊಟ್ಟಿಯ ರುಚಿಯೇ ಹಂತಾದು.

ಮಕ್ಕಳು ಛಂದಗೆ, ದುಂಡದುಂಡಗೆ ಸಮೃದ್ಧ ತುಂಬಕೊಂಡಿದ್ರ, ಅಲ್ಲಿ 'ಎಳ್ಳಾಮಾಸಿ' ಇದ್ದಂಗ ಅದ ಅಂತಾರ. ಮಕ್ಕಳನ್ನ ಅಮಾಸಿಗೆ ಹೋಲಿಸಿದ್ರಲ್ಲ ಅಂತ ಬ್ಯಾಸರ ಪಡೂದು ಬ್ಯಾಡ. ಅದು ಸಮೃದ್ಧ ಸುಗ್ಗಿ ಕಾಲ. ಕಾಳುಗಳೆಲ್ಲ ರಸದುಂಬಿಕೊಂಡು ನಳನಳಿಸುವ ಕಾಲ. ಅದಕ್ಕ ರಸದುಂಬಿದ ಎಳಿಕಾಳಿನ್ಹಂಗ ಅನ್ನೂದಕ್ಕ 'ಎಳ್ಳಾಮಾಸಿ' ಅಂತಾರ. ದೃಷ್ಟಿನೂ ಆಗಾಂಗಿಲ್ಲ, ಅಮಾಸಿ ಕರಿಕತ್ತಲ ಅದರ ಜೊತಿಗೆ ಇರ್ತದಲ್ಲ ಅದಕ್ಕ.

ಕರದ ಬಜ್ಜಿ ಬಿಟ್ರ, ಈ ಕಾಲದಾಗ ಹೆಚ್ಚಿಗೆ ತಿನ್ನೂದು ಹುರದಿದ್ದು, ಸುಟ್ಟಿದ್ದು ಮತ್ತು ಬೇಯಿಸ್ಲಿದ್ದು. ತೊಗರಿ ಕಾಯಿ, ಅವರಿಕಾಯಿ ಇವನ್ನೆಲ್ಲ ಉಪ್ಪ ನೀರಾಗ ಕುದಿಸಿ, ಒಂದು ಥರಾತನಾಗ (ಹರಿವಾಣ) ಹಾಕ್ಕೊಂಡು ಮನಿ ಮುಂದೆಲ್ಲ ಅಂಗಳದಾಗ ಕುಂದರ್ತಾರ. ಎಲ್ಲಾರ ಮುಂದೂ ಒಂದೊಂದು ಪೇಪರ್ ತುಂಡು ಇಟ್ಕೊಂಡು ಕುಂತಿರ್ತಾರ. ಕಾಳಗಳನ್ನು ಸಿಪ್ಪಿಯಿಂದ ಸೊರಕ್ಕಂತ ಹೀರಕೊಂಡು, ಸಿಪ್ಪಿ ತಮ್ಮ ಎದುರಿನ ಪೇಪರ್‌ನಾಗ ಗುಡ್ಡಿ ಹಾಕ್ತಾರ. ಮಾತು, ಹರಟಿ, ಸಣ್ಣ ಮಕ್ಕಳಿದ್ರ ಅವರಿಂದ ಹಾಡು ಡಾನ್ಸು ಎಲ್ಲಾ ಇದೇ ಬೈಠಕ್‌ನಾಗ ಜೋರೆ ಸಾಗ್ತಾವ. ಅಂಗಳ ಇರೂ ಮನೀಗೆಲ್ಲ ಒಂದೊಂದು ಕಟ್ಟೀನೂ ಇದ್ದ ಇರ್ತದ. ಈ ಕಟ್ಟೀನೆ ಎಲ್ಲಾ ಮಕ್ಕಳಿಗೂ ಮೊದಲ ವೇದಿಕೆನೂ ಹೌದು. ಸಂಜಿಕತ್ತಲದಾಗ ಬೆಳ್ಳನೆ ಬೆಳಗುವ ಚುಕ್ಕಿ ನೋಡ್ಕೊಂತ, ಅಪ್ಪ, ಅವ್ವ, ಮಾಮಾ, ಮಾಮಿ, ಕಾಕಾ, ಕಾಕು, ಮೌಸಿ, ಕಾಕಾ ಇವರೆಲ್ಲ ಹತ್ರ ವಾಹ್‌ವಾ ಅನ್ನಿಸಿಕೊಳ್ಳೂದಂದ್ರ ಎಲ್ಲಾ ಮಕ್ಕಳಿಗೂ ಭಾಳ ಪ್ರೀತಿರಿ.

ಚಳಿಗಾಲದ ಸಂಜಿ ಅಷ್ಟೇ ಅಲ್ಲ, ಮಧ್ಯಾಹ್ನನೂ ಇಷ್ಟೇ ಆಸಕ್ತಿಕರ ಆಗಿರ್ತದ. ಒಂದು ಹೊರಿ ಕಬ್ಬು ತಂದ ಹಾಕಿದ್ರ, ಉಂಡು ಕಬ್ಬು ತಿನ್ನಬೇಕು ಅಂತ ಹೇಳ್ಕೊಂತ ಹಿರ್‍ಯಾರು ಕಬ್ಬು ಸುಲ್ಯಾಕ ಕುಂದರ್ತಾರ. ಸಣ್ಣೋರು, ಬಟ್ಟಲ, ಪ್ಲೇಟು ಹಿಡಕೊಂಡು ಕುಂದರ್ತಾರ. ಮಣಕೈತನಾನೂ ಸುರಿಯೂ ಕಬ್ಬಿನ ಸಿಹಿರಸ ಸವ್ರೊಂತ, ಮುಖ ಎಲ್ಲಾ ಕಲಿ ಮಾಡಕೊಂಡು, ಬಿಸಿಲು ಕಾಯ್ಸಕೊಂತ ತಿಂತೀವಿ. ಈ ಕಬ್ಬಿನ ಸಿಹಿಯಷ್ಟೇ ಸಿಹಿಯಾದ ಒಂದು ಸಣ್ಣ ನಿದ್ದಿ ಸೈತ ಮುಗಿಸಿಬಿಡ್ತೀವಿ.

ಚಳಿಗಾಲಂದ್ರ ನಮ್ಮೂರ ಚಳಿಗಾಲನೇ ಮಜಾ ಕೊಡೂದು ಅಂತ ಅನ್ನೂದು ಇವೆಲ್ಲ ಕಾರಣಕ್ಕ. ಚಳಿಗಾಲದಾಗ ಭೂಮಿ ಅಷ್ಟ ಹಸಿರಿನಿಂದ ಸಮೃದ್ಧ ಆಗೂದಿಲ್ಲ, ಇಂಥ ಹಂಚ್ಕೊಂಡು ತಿನ್ನುವ ಸಂಭ್ರಮದೊಳಗ, ನಮ್ಮೊಳಗಿನ ಜಗತ್ತು ದೊಡ್ಡದಾಗ್ತದ. ಕೂಡಿ ಬದುಕುವ ಸಂತೋಷ ತಿಳಿಸಿಕೊಡ್ತದ. ಕಾಳು ಬೆಳಿಯೂ ರೈತನ ಕಷ್ಟ ಹೇಳ್ತದ. ಹೊಲಕ್ಕ ಹೋಗಿ ನಿಂತಾಗ, ಮೀಸಿ ಅಡಿ ನಗುವ ರೈತನ ಶ್ರಮ ಹಸಿರಾಗಿ ಅರಳಿದ್ದು ಕಂಡು ಮೈಮನಸು ತುಂಬಿ ಬರ್ತದ. ಬದುಕೂದನ್ನು ಆಸ್ವಾದಿಸೂದು, ಆಚರಿಸೂದು ಹೇಳಿ ಕೊಡೂದ್ರಿಂದ ಚಳಿಗಾಲ ಭಾಳ ಆಪ್ತವಾಗಿ ಬಿಡ್ತದ. ಸಾಧ್ಯ ಆದ್ರ ಒಂದು ಎಳ್ಳಾಮಾಸಿ ಊಟ ಸವದು ಬರ್ರಿ — ನಾ ಹೇಳಿದ್ದೆಲ್ಲ ಖರೇನ ಅನ್ನಸ್ತದ ಇಲ್ಲೊ ಅಂ ನೀವ ಹೇಳಾಕತ್ರಿ. ❋



# ಸುದ್ದಿ ಚುರುಮುರಿ

**– ಸಿ.ಆರ್. ಸತ್ಯ**

### ಭಗವಂತನ ಇಚ್ಛೆ

**ಬೆಂಗಳೂರು:** ಮೊನ್ನೆ ಧಾರಾಕಾರವಾಗಿ ಹುಯ್ದ ಮಳೆಯಲ್ಲಿ, ಉತ್ತರ ಬೆಂಗಳೂರಿನ ಹರೋಹರ ಚಿಕಿತ್ಸಾಲಯದ ಆಂಬುಲೆನ್ಸ್ ಗಂಭೀರ ಸ್ಥಿತಿಯಲ್ಲಿದ್ದ ರೋಗಿಯೊಬ್ಬರನ್ನು ಕೊಂಡೊಯ್ಯುತ್ತಿದ್ದಾಗ, ಟಿ.ವಿ.ಸ್ಟೇಶನ್ ಮುಂದೆ ಟ್ರಾಫಿಕ್ ಜ್ಯಾಮ್‌ನಿಂದಾಗಿ, ಡ್ರೈವರ್ ಗಿರೀಶ್ ಎಂಜಿನ್ನನ್ನು ಆಫ್ ಮಾಡಿ ಕಾದರಂತೆ. ಒಂದು ಗಂಟೆಯ ಕಾಲದ ನಂತರ ಹೇಗೋ ಮುಂದಕ್ಕೆ ಚಲಿಸಿ, ಕೊನೆಗೂ ಆಸ್ಪತ್ರೆ ತಲುಪಿದಾಗ ಗಿರೀಶ್ ಅವರಿಗೆ ಆಘಾತ ಕಾದಿತ್ತು. ಒಳಗಿದ್ದ ರೋಗಿ ನಾಪತ್ತೆಯಾಗಿದ್ದರಂತೆ! ಇದರ ಬಗ್ಗೆ ಮಾತನಾಡುತ್ತಾ ಹರೋಹರ ಆಸ್ಪತ್ರೆಯ ಮುಖ್ಯ ವೈದ್ಯರಾದ ಡಾ|| ಭಗವಂತ ಅವರು ''ಕಾದೂ ಕಾದೂ ಬೇಸತ್ತಾಗಿ, ರೋಗಿ ಆಂಬುಲೆನ್ಸ್‌ನಿಂದ ಕೆಳಗಿಳಿದು ಇಲ್ಲಿಗೆ ನಡೆದುಕೊಂಡೇ ಬಂದರು. ಇಂಜಕ್ಷನ್, ಮಾತ್ರೆಗಳನ್ನು ತೊಗೊಂಡು ಆಗಲೇ ಅವರ ಮನೇಗೂ ನಡೆದುಕೊಂಡೇ ಹೊರಟು ಹೋದ್ರು! ಗಂಭೀರ ಸ್ಥಿತಿಯಲ್ಲಿರುವ ಎಲ್ಲಾ ರೋಗಿಗಳೂ ಇದೇ ರೀತಿ ಜಾಣರಾಗಿ ಆಸ್ಪತ್ರೆಗೆ ಬಂದರೆ ತುರ್ತು ಪರಿಸ್ಥಿತಿ ಅನ್ನೋದೇ ಇರೋದಿಲ್ಲ, ರೋಗಿಗಳು ಇನ್ನಷ್ಟು ವರ್ಷಗಳು ಬದುಕಿ ಬಾಳ್ತಾರೆ'' ಅಂತ ವಿವರಣೆ ನೀಡಿದ್ದಾರೆ......

### ಕಾಣೆಯಾಗಿದ್ದಾರೆ

**ಬೆಂಗಳೂರು:** ಕಾರ್ಪೋರೇಶನ್ ಆಫೀಸಿನ ಮುಂದೆ ಇಷ್ಟು ವರುಷಗಳ ಕಾಲ ಸಂಯಮದಿಂದ ಕೈನಲ್ಲಿ ಕತ್ತಿ ಹಿಡಿದುಕೊಂಡು ತಾವು ಕಟ್ಟಿದ ಊರಾದ ಬೆಂಗಳೂರಿನ ಭವ್ಯತೆಯನ್ನು ಸವಿಯುತ್ತಿದ್ದ ಶ್ರೀಮಾನ್ ಎಂ. ಕೆಂಪೇಗೌಡರು ಇಂದು ಬೆಳಿಗ್ಗೆಯಿಂದ ನಾಪತ್ತೆಯಾಗಿದ್ದಾರೆ. ತಾವು ನಿಂತಿದ್ದ ಕಟ್ಟೆಯ ಮೇಲೆ ಅವರು ಬರೆದಿಟ್ಟಿದ್ದ ಒಂದು ಕಾಗದದಲ್ಲಿ ''ಬಿ.ಬಿ.ಎಂ.ಪಿ. ಅವರು ಯಾವಾಗ ನನ್ನ ಸುತ್ತಲೂ ಊರಿನ ಕಸಾನೆಲ್ಲಾ ಹಾಕುತ್ತಾರೋ ಎಂಬ ಭಯದಿಂದ ನಾನು ಯಾರಿಗೂ ತಿಳಿಯದ ಜಾಗಕ್ಕೆ ಹೋಗುತ್ತಿದ್ದೀನಿ. ನನ್ನನ್ನು ಹುಡುಕಬೇಡಿ'' ಅಂತ ಹೇಳಿದ್ದಾರೆ. ಕ್ಲೋಸ್ ಕಾಲರ್ ಕೋಟ್, ಟೈಟ್ ಪೈಜಾಮ, ಮಾಗಡಿ ಪೇಟ, ಕರಿ ಮೀಸೆ, ವಯಸ್ಸು ಅರವತ್ತು, ಎತ್ತರ ಐದೂವರೆ ಅಡಿ, ಕೈನಲ್ಲಿ ಕತ್ತಿ–ಇಷ್ಟು ವಿವರಗಳೊಡನೆ ಯಾರಾದರೂ ಶ್ರೀಮಾನ್ ಕೆಂಪೇಗೌಡರನ್ನು ಪತ್ತೆ ಹಚ್ಚಿದರೆ, ಸರ್ಕಾರ ಅವರಿಗೆ ನಗದು ಬಹುಮಾನ ಹಾಗೂ ಶ್ರೀಗಂಧದ ಫಲಕವನ್ನೂ ನೀಡಲು ಆದೇಶಿಸಿದೆ......

### ನ್ಯಾಯಾಲಯದ ಸುದ್ದಿ

**ಮೈಸೂರು:** ತಮ್ಮ ಬಗ್ಗೆ ತಮ್ಮ ಗಂಡ ಬಹಳ ಹೀನಾಯವಾಗಿ ವರ್ತಿಸಿದ್ದಾರೆ ಎಂಬ ಆರೋಪದೊಂದಿಗೆ ಶ್ರೀಮತಿ ಕಾಳೀಮಣಿ ಅವರು ಹೈಕೋರ್ಟ್ ಮೆಟ್ಟಿಲನ್ನು ಹತ್ತಿದ್ದಾರೆ. ಇಂದು ನಡೆದ ವಿಚಾರಣೆಯಲ್ಲಿ ನ್ಯಾಯಾಧೀಶರು ಆರೋಪಿ ಶಾಂತಮೂರ್ತಿಯವರ ಹೇಳಿಕೆ ಕೇಳಿದಾಗ, ಶಾಂತಮೂರ್ತಿಯವರು ''ಮಹಾಸ್ವಾಮಿ... ಅಂದು ನವರಾತ್ರಿಗೆಂದು

ನಮ್ಮ ಮನೆ, ಅಂಗಡಿ ಎಲ್ಲಾ ಕ್ಲೀನ್ ಮಾಡ್ತಾ ಇದ್ವಿ, ಹಳೇ ಸಾಮಾನುಗಳನ್ನೆಲ್ಲಾ ಹೊರಗೆ ಎಸೀತಿದ್ದೆ, ನನ್ನ ಹೆಂಡ್ತೀನೇ ಕಳೆದ ಐದು ವರ್ಷಗಳಿಂದ ನಿಮಗೆ ಮನೆಯಲ್ಲಿ ಏನೇನು ಬೇಕಿಲ್ಲ ಅಂತ ಅನ್ನಿಸಿವೆಯೋ ಅವೆಲ್ಲಾ ಎಸೆಯೋ ಸಾಮಾನುಗಳೇ – ಅವನ್ನು ನಿರ್ದಾಕ್ಷಿಣ್ಯದಿಂದ ಹೊರಗೆ ಹಾಕಿ ಅಂತ ಅಂದಳು. ಅದಕ್ಕೆ ನಾನು – ಹಾಗಾದ್ರೆ ನಿನ್ನನ್ನ ಎಲ್ಲಿ ಬಿಸಾಕಲಿ? ಅಂತ ಕೇಳಿದೆ. ಇಷ್ಟಕ್ಕೆಲ್ಲಾ ಇವಳು ನನ್ನನ್ನ ನಿಮ್ಮ ನ್ಯಾಯಾಲಯಕ್ಕೆ ಎಳೆದುಕೊಂಡು ಬಂದಿದ್ದಾಳೆ'' ಅಂತ ಅಂದ್ರಂತೆ. ಸ್ವಲ್ಪ ಮೈಕೈಯೆಲ್ಲಾ ಬೆವರು ಬಂದಂತಾಗಿ, ನ್ಯಾಯಾಧೀಶರು ''ಕೇಸ್ ಪೋಸ್ಟ್‌ಪೋನ್ಡ್ ಟು 2013!'' ಅಂತ ಅವರ ಚೇಂಬರ್‌ಗೆ ಹೊರಟೇ ಹೋದ್ರಂತೆ.....

### ಹೀಗೂ ಕನ್ನಡ!

**ಜಿಲ್ಲಾ ಸುದ್ದಿ ಸಂಗ್ರಹ:** ಇತ್ತೀಚೆಗೆ ರಾಜ್ಯದ ನಾನ ಕಡೆಗಳಲ್ಲಿ ನಡೆದ ಕನ್ನಡ ರಾಜ್ಯೋತ್ಸವ ಸಮಾರಂಭಗಳಲ್ಲಿ ಸಾವಿರಾರು ಜನರು (ಭಾಷಣಕಾರೂ, ಪ್ರೇಕ್ಷಕರೂ ಸೇರಿ) 'ರಾಜ್ಯೋತ್ಸವ' ಪದವನ್ನು 'ರಾಜ್ಯೋಸ್ತವ' ಅಂತ ಉಚ್ಚರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ''ಇದೊಂದು ಕನ್ನಡ ಭಾಷೆಯ ಅಭಿವೃದ್ಧಿ ಪಥದಲ್ಲಿ ಹೊಸ ತಿರಿವು ಹಾಗೂ ಗಂಭೀರ ಪರಿಸ್ಥಿತಿ. ಎಲ್ಲರಿಗೂ ಇಷ್ಟವಾಗಿ, ಹೇಳಲೂ ಸುಲಭವಾಗಿ 'ರಾಜ್ಯೋಸ್ತವ' ಅಂತ ಅಂದರೆ ಅದರಲ್ಲಿ ತಪ್ಪೇನಿಲ್ಲ. ಲೌಕಿಕವಾಗಿ ಎಲ್ಲರ ಬಾಯಿಗಳಲ್ಲೂ ಬಂದ ಉಚ್ಚಾರಣೆಯೇ ಭಾಷೆಯ ಬೆಳವಣಿಗೆಗೆ ಆಧಾರ. ಹಾಗಾಗಿ, ಮುಂದಿನ ವರುಷದಿಂದ ಈ ಪದವನ್ನು ''ರಾಜ್ಯೋಸ್ತವ'' ಎಂದು ಅಧಿಕೃತವಾಗಿ ಕರೆಯಲು, ಸರ್ಕಾರ ಆಳವಾದ ಚಿಂತನೆಯಲ್ಲಿದೆ'' ಎಂದು ಮಂತ್ರಿವರ್ಯರು ಹೇಳಿದ್ದಾರೆ.

### ಚೀನಾಕ್ಕೆ ಬೆಂಗಳೂರಿನ ತಿಂಡಿ

ಚೀನಾ ದೇಶದ ಪ್ರಸಿದ್ಧ ಉದ್ಯಮಿ ಚೊಂಗ್ ಚೋ ಚಾನ್ ಅವರು ಇಂದು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ''ಬೆಂಗಳೂರಿನಿಂದ ತಾಂತ್ರಿಕತೆಯನ್ನು ಚೀನಾಗೆ ಸಾಗಿಸಿ, ನಮ್ಮ ಎರಡು ದೇಶಗಳ ಸಹಕಾರ ಯೋಜನೆಗೆ ಇಂದು ನಾಂದಿ ಹಾಕುತ್ತಿದ್ದೇನೆ. ಬ್ರಿಗೇಡ್ ರೋಡ್ ಮೂಲೆಯಲ್ಲಿರುವ ಚಾಟ್ ಹಾಗೂ ಬಿರ್ಯಾನಿ ಗಾಡಿಯ ಮಾಲೀಕ ಸೆಲ್ವನ್‌ತಂಬಿ – ಚೈನೀಸ್ ಫುಡ್ ಪರಿಣತನೂ ಹೌದು. ಅವನಿಂದ ನೀವು ಇಲ್ಲಿ ತಿನ್ನುವ 'ಗೋಬಿ ಮಂಚೂರಿಯನ್' ತಿಂಡಿಯ ಪರಿಚಯವಾಯ್ತು, ಹಾಗೂ ಅದರ ತಯಾರಿಕೆಯ ಬಗ್ಗೆ ತಾಂತ್ರಿಕತೆಯೂ ಸಿಕ್ಕಿದೆ. ಸೋಜಿಗವೆಂದರೆ, ನಮ್ಮ ತಂದೆ ಗೋಬಿ ಮರಳುಗಾಡು ಕಡೆಯವರು. ನನ್ನ ತಾಯಿ ಮಂಚೂರಿಯಾನಿಂದ ಬಂದವರು. ಗೋಬಿ ಮಂಚೂರಿಯನ್ ಅನ್ನೋ ಹೆಸರಿನ ತಿಂಡಿ ಇದೆ ಅನ್ನೋದು ನಮ್ಮ ಚೀನಾದಲ್ಲಿ ಯಾರಿಗೂ ಗೊತ್ತೇ ಇಲ್ಲ! ಈ ತಿಂಡಿ ಇನ್ನು ಮೇಲೆ ಚೀನಾದಲ್ಲಿನ ನನ್ನೆಲ್ಲಾ ಬಾಂಧವರಿಗೂ ದಕ್ಕಲಿದೆ. ಇದನ್ನು ರೋಡಿನ ಪಕ್ಕದ ಗಾಡಿಯಲ್ಲಿ ತಯಾರಿ ಮಾಡಿದರೆ, ಅದರ ರುಚಿಯೂ ಜಾಸ್ತಿ ಅನ್ನಿಸುತ್ತೆ ಅಂತ ಸೆಲ್ವನ್ ಹೇಳಿದ್ದಾನೆ. ಇನ್ನು ಮೇಲೆ ಬೀಜಿಂಗ್, ಶಾಂಗಾಯ್ ರಸ್ತೆಗಳಲ್ಲೆಲ್ಲಾ ನನ್ನ ಗಾಡಿಗಳೇ ಕಂಡರೆ, ಅದರಲ್ಲಿ ಆಶ್ಚರ್ಯವೇನಿಲ್ಲ'' ಅಂತ ವ್ಯಕ್ತಪಡಿಸಿದ್ದಾರೆ.



# ಗ್ರಂಥಾವಲೋಕನ

– ವಿ. ಮರ್ಶಕ ರಾವ್

ಗ್ರಂಥ: ನೀವು ತಿಳಿಯದೆ ಇರಬೇಕಾದ ವಿಷಯಗಳು

ಲೇಖಕರು: ಜ್ಞಾನಯ್ಯ

ಪ್ರಕಾಶಕರು: ಸರ್ವಜ್ಞ ಪಬ್ಲಿಕೇಷನ್ಸ್

ಬೆಲೆ: ನಮೂದಿಸಿಲ್ಲ

**ಈ**ಗಿನದು ಜ್ಞಾನಸ್ಫೋಟದ ಯುಗ. ಮಾಹಿತಿ ಕ್ರಾಂತಿಯೇ ಆಗುತ್ತಿದೆ. ಪ್ರತಿ ದಿನ, ಪ್ರತಿ ಘಳಿಗೆ ಹೊಸ ಹೊಸ ವಿಷಯಗಳು ಹೊರಬರುತ್ತಿದ್ದು ಜ್ಞಾನದಾಹಿಗಳ ಗೊಂದಲ ಹೇಳತೀರದ್ದಾಗಿದೆ. ಯಾವುದನ್ನು ಎಷ್ಟು ಅರಿಯಬೇಕು ಎಂದು ತಿಳಿಯಲಾಗದೆ ಇರುವುದೇ ಸಮಸ್ಯೆಗೆ ಕಾರಣ. ಈ ಗ್ರಂಥದ ಲೇಖಕರಾದ ಜ್ಞಾನಯ್ಯನವರು ಒಂದು ಕಡೆ ಹೇಳುತ್ತಾರೆ: 'ಎಲ್ಲರಿಗೂ ಎಲ್ಲವೂ ಯಾವಾಗಲೂ ಗೊತ್ತಿರುವುದಿಲ್ಲ.' ಆಹಾ! ಎಂಥ ಮಹತ್ವಪೂರ್ಣ ವಾಕ್ಯ! 'ಎಲ್ಲರಿಗೂ ಎಲ್ಲವೂ ಯಾವಾಗಲೂ' ಎನ್ನುವ ಬದಲು 'ಎಲ್ಲರಿಗೂ ಎಲ್ಲವೂ' ಎಂದು ಹೇಳಿದರೆ ಸಾಕು. ಅಂದರೆ ಎಲ್ಲರಿಗೂ ಎಲ್ಲವೂ ಗೊತ್ತಿರುವುದಿಲ್ಲ, ಆದರೆ ನಮಗೆ ಗೊತ್ತಿರಬೇಕಾದ ವಿಷಯಗಳು ಯಾವುವು? ಗೊತ್ತಿಲ್ಲದಿರಬೇಕಾದ ವಿಷಯಗಳು ಯಾವುವು? ಈ ಮಾಹಿತಿ ಕ್ರಾಂತಿ ಯುಗದಲ್ಲಿ ನಾವು ಅರಿಯದೆ ಇರಬೇಕಾದ ವಿಷಯಗಳು ಯಾವುವು ಎಂಬುದನ್ನು ಮೊದಲು ಅರಿತರೆ ಯಾವುದನ್ನು ಅರಿಯಬೇಕು ಎಂಬುದನ್ನರಿಯಲು ನಂತರ ಸುಲಭವಾಗುವುದು ಎಂಬುದು ನಮ್ಮ ಅನಿಸಿಕೆ.

ಈ ಜಿಜ್ಞಾಸೆಯನ್ನು ತೀರಾ ಸರಳೀಕರಿಸಿ ಹೇಳಲು ಈ ಸಣ್ಣ ಉದಾಹರಣೆಯನ್ನು ಗಮನಿಸಬಹುದು: ನಿಮ್ಮ ಫೇವರಿಟ್ ಹೋಟೆಲ್‌ಗೆ ಹೋಗಿದ್ದೀರಿ. ಅಲ್ಲಿ ಸಿಗುವ ಎಲ್ಲ ತಿಂಡಿಯನ್ನೂ ತಿನ್ನುವ ಬಯಕೆ ನಿಮ್ಮದು. ಆದರೆ ನಿಮ್ಮ ಹೊಟ್ಟೆ/ಪರ್ಸ್/ಆರೋಗ್ಯ ಹಾಗೆ ಮಾಡಲು ಬಿಡುವುದಿಲ್ಲ. ಆಗ ಯಾವ ತಿಂಡಿ ಬೇಡ ಎಂದು ನೀವು ನಿರ್ಧರಿಸಿದರೆ ಉಳಿದಿದ್ದು ಸಹಜವಾಗಿ ನಿಮಗೆ ಬೇಕಾಗುತ್ತದೆ.

ಇದೇ ಸೂತ್ರವನ್ನು ಲೇಖಕ ಜ್ಞಾನಯ್ಯ ಈ ತಮ್ಮ ಪುಸ್ತಕದಲ್ಲಿ ಅಳವಡಿಸಿಕೊಂಡಿದ್ದಾರೆ. ವಿವಿಧ ವಿಷಯಗಳಡಿ ಅವರು ಅನುಕ್ರಮವಾಗಿ ಯಾವುದನ್ನು ಎಷ್ಟು ಅರಿಯಬಾರದು ಎಂದು ಸರಳವಾಗಿ ಎಲ್ಲರಿಗೂ ಮನಮುಟ್ಟುವಂತೆ ವಿವರಿಸಿದ್ದಾರೆ. ಯಾವುದನ್ನು ಅರಿತರೆ ಎಷ್ಟು ಅಪಾಯ ಎಂದೂ ಎಚ್ಚರಿಸಿರುವುದು ಈ ಪುಸ್ತಕದ ಇನ್ನೊಂದು ಮಹತ್ವದ ಅಂಶ. ಈ ದಿಕ್ಕಿನಲ್ಲಿ ಜ್ಞಾನಯ್ಯನವರ ಶ್ರಮ ಮತ್ತು ಕ್ರಮ ಶ್ಲಾಘನೀಯ.

ಆದರೆ ಈ ಪುಸ್ತಕ ತೀರಾ ತಡವಾಗಿ ಬಿಡುಗಡೆಯಾಗಿದೆ ಎಂದು ಹೇಳಲೇಬೇಕಾಗಿದೆ. ಈಗಾಗಲೇ ಇದು ಹಲವಾರು ಆವೃತ್ತಿಗಳನ್ನು ಕಂಡಿದ್ದರೆ ಮಾಹಿತಿ ಕ್ರಾಂತಿ ಅನೇಕರನ್ನು

ಗೊಂದಲದಲ್ಲಿ ಕೆಡುವುತ್ತಿರಲಿಲ್ಲವೇನೋ. ಏನು ತಿಳಿದುಕೊಳ್ಳಬೇಕು ಎಂಬುದರ ಅರಿವು ಸರಿಯಾಗಿ ಇರದೆ ಏನೇನೋ ತಿಳಿದುಕೊಳ್ಳಲು ಹೋಗಿ ದಾರಿ ತಪ್ಪುವವರಿಗೆ ಈ ಪುಸ್ತಕ ಮಾರ್ಗದರ್ಶಿ ಆಗಲಿಕ್ಕೆ ಸಾಕು. ನಾವು ಯಾವ ವಿಷಯಗಳನ್ನು ತಿಳಿದುಕೊಳ್ಳಲು ಪ್ರಯತ್ನವೇ ಪಡಬೇಕಿಲ್ಲ ಎಂದು ಇದರಿಂದ ಸುಲಭವಾಗಿ ತಿಳಿದುಕೊಳ್ಳಬಹುದು. ಇಗ್ನೊರೆನ್ಸ್ ಈಸ್ ಬ್ಲಿಸ್ ಅಥವಾ ಅಜ್ಞಾನವೇ ಆನಂದ. ಈ ಸ್ಥಿತಿಯ ಹಿಂದಿನ ಮೆಟ್ಟಿಲೇ ಈ ಪುಸ್ತಕ.

ಸುಂದರವಾದ ಮುದ್ರಣ, ಆಕರ್ಷಕ ವಿನ್ಯಾಸ, ದಪ್ಪ ಮಿರುಗುವ ಕಾಗದ, ವರ್ಣರಂಜಿತ ರಕ್ಷಾಪುಟ ಮುಂತಾದವುಗಳಿಂದ ಈ ಪುಸ್ತಕ ಎಲ್ಲರ ಕಣ್ಣು ಸೆಳೆಯುತ್ತದೆ. ಬೆಲೆ? ಅದನ್ನು ಎಲ್ಲೂ ನಮೂದಿಸಿಲ್ಲ, ಅದನ್ನು ತಿಳಿದುಕೊಳ್ಳಬೇಕಾದ ಅಗತ್ಯವಿಲ್ಲ ಎಂದೇ? ಅಥವಾ ಈ ಪುಸ್ತಕಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲವೆ?

## ಇ-ಗಾದೆಗಳು

- ಫೇಸ್‌ಬುಕ್‌ನಲ್ಲಿ ಫ್ರೆಂಡ್ ಆದರೆ ಫೇಸ್ ಟು ಫೇಸ್ ಸಿಕ್ಕಾಗ ಸಾಲ ಕೇಳೋಕಾಗುತ್ತಾ?
- ಟೀವಿಯಲ್ಲಿ ಹೋದ ಮಾನ ಯುಟ್ಯೂಬ್‌ನಲ್ಲಿ ಬರುತ್ತಾ?
- ಟೈಪಿಂಗ್ ಬಾರದವಳು ಕೀ ಬೋರ್ಡ್ ಸರಿ ಇಲ್ಲ ಅಂದಳಂತೆ.
- ಕೂತು (ಮೊಬೈಲ್‌ನಲ್ಲಿ) ಕೊರೆಯೋನಿಗೆ ಕೋಟಿ ಕರೆನ್ಸಿ ಇದ್ದರೂ ಸಾಲದು.
- ಪಾಪಿ ಟೆರೇಸಿಗೆ ಹೋದರೂ ನೆಟ್ ವರ್ಕ್ ಶೂನ್ಯ.
- ಕಮೆಂಟಿಗೆ ಹೆದರಿ ಬ್ಲಾಗ್ ಬಂದ್ ಮಾಡೋದಿಕ್ಕೆ ಆಗುತ್ತಾ?
- ಫೇಸ್‌ಬುಕ್‌ನಿಂದ ಹೋದೆಯಾ ಅಂದರೆ ಟ್ವಿಟ್ಟರ್‌ನಲ್ಲಿ ಬಂದೆ ಅನ್ನೋದೆ?
- ಇಮೇಲ್‌ನಲ್ಲಿ ಕಾಣಿಸಿಕೊಂಡವಳು ಫೇಸ್‌ಬುಕ್‌ನಲ್ಲಿ ಬಾರದಿರುವಳೆ?
- ಬ್ಲಾಗಿನು ತೆರೆದು ಸೇವೆಯನು ಕೊಡು...
- ಮಂಗನ ಕೈಲಿ ಮೌಸ್ ಕೊಟ್ಟ ಹಾಗೆ
- ಕರೆಂಟ್ ಇದ್ದಾಗ ಕೀ ಮಾಡಿಟ್ಟಕೊ.
- ಫೈಲ್‌ಗಳೆಲ್ಲ ಕೊಳ್ಳೆಹೋದ ಮೇಲೆ ಲಾಗ್ ಆಫ್ ಮಾಡಿದರಂತೆ.
- ಖ್ಯಾತಿ ಎಂದರೆ ಫೇಸ್‌ಬುಕ್‌ನಲ್ಲಿ ಫೋಟೊ ಬರುವುದಲ್ಲ, ಗೂಗಲ್‌ನಲ್ಲಿ ಫೋಟೊ ಬರುವುದು.



*ಸಂಗ್ರಹ: ಅಲ್ಲಿಂದ, ಇಲ್ಲಿಂದ*



## ತುಂತುರುತುಂತುರುತುಂತುರುತುಂತುರುತುಂತುರುತುಂತುರುತುಂತುರು

**- ದಂಡಾ**

- ಕಸ ಕಸಿವಿಸಿಯಾದಾಗ ಏನಾಗುತ್ತದೆ? ಬೆಂಗಳೂರು.
- ಕನ್ನಡಕ್ಕಾಗಿ ಕೈ ಎತ್ತಿರುವ ಕೈಗಳು ಚಿನ್ನದ ಚೈನುಗಳನ್ನು ಎಟುಕಿಸಿಕೊಳ್ಳುತ್ತಿರುವ ಸಂದರ್ಭವಿದು.
- ಅಜರುದ್ದಿನ್ ಕ್ರಿಕೆಟ್‌ನಲ್ಲಿ ಕಳೆದುಕೊಂಡಿದ್ದು ರಾಜಕೀಯದಲ್ಲಿ ಗಳಿಸಿರುವವರೆ?
- ಕರಪ್ಷನ್ ಮಾರಾ ನಹಿ, ಮರ್ತೆ ನಹಿ... ವ್ಹಾ... ವ್ಹಾ! ಕ್ಯಾ ಡೈಲಾಗ್!
- *Experience is like a hair comb. You get it when you become bald.*
- ಬೆಳಕೆಂದರೆ ನನಗೆ ಇಷ್ಟ ಏಕೆಂದರೆ ಅದು ನನಗೆ ದಾರಿ ತೋರಿಸುತ್ತದೆ. ಕತ್ತಲೆಯನ್ನೂ ಸಹಿಸಿಕೊಳ್ಳುವೆ. ಏಕೆಂದರೆ ಅದು ನನಗೆ ನಕ್ಷತ್ರಗಳನ್ನು ತೋರಿಸುತ್ತದೆ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಹಾಡಿದರೆ ಜೀವ ಉಳಿಯುತ್ತದೆ ಎಂದರೂ ಸಹ ನನಗೆ ಹಾಡಲು ಸಾಧ್ಯವಾಗದು.
- *No one loses what he doesn't own.*
- ಈ ಭೂಮಿಯ ಮೇಲೆ ಅನೇಕ ಕೊರತೆಗಳಿವೆ – ಇಂಧನ, ನೀರು, ಕಲ್ಲಿದ್ದಲು, ಶುದ್ಧ ಗಾಳಿ ಇತ್ಯಾದಿ. ಆದರೆ ವಿಚಾರಧಾರೆಯ ಕೊರತೆಯಷ್ಟು ಬೇರೆ ಯಾವುದೂ ಇಲ್ಲ.
- ಥಾಲಿ ಒಂದು ಬಂಗಲೆ ಎನ್ನಬಹುದಾದರೆ ಮೂರು ಬಟ್ಟಲಿನ ಟಿಫಿನ್ ಬಾಕ್ಸ್ ಅನ್ನು ಒಂದು ಫ್ಲಾಟ್‌ಗೆ ಹೋಲಿಸಬಹುದು.
- *"T" is silent in Robert Vadra.*
- ಒಂದು ಜನಗಳ ಗುಂಪಿನಲ್ಲಿ ನಾನು ಪ್ರಾಣಿಯಾಗಿ ಕಾಣುತ್ತಿದ್ದೇನೆ ಎಂದು ನಿಮಗನಿಸಿದರೆ ಸಿಂಹವಾಗಿರಿ.
- ಹಸಿವಿಲ್ಲದಿದ್ದರೆ ಎಲ್ಲವೂ ಸಪ್ಪೆ.
- ಶೇ. 87ರಷ್ಟು ಮಂದಿ ಯುವಕರಿಗೆ ಬೆನ್ನು ನೋವಂತೆ. ಉಳಿದವರ ಬಳಿ ಕಂಪ್ಯೂಟರ್ ಇಲ್ಲ.
- *At the door of the miserable rich man sleeps the contented begger.*
- ಸುಂದರವಾಗಿ ಇರುವುದು ಬೇರೆ. ಸುಂದರವಾಗಿ ಅಭಿನಯಿಸುವುದು ಬೇರೆ.
- ಕೆಟ್ಟ ಮೇಲೆ ಬುದ್ಧಿ ಬಂತು ಎಂದಾಗ ಕೆಡದೇ ಇದ್ದರೆ ಬುದ್ಧಿ ಬರಲೇ ಇಲ್ಲ ಎಂದರ್ಥವೆ?



# ಮುಂದೆ ಬರಲಿರುವ ಚಿತ್ರಗಳು

**ಅಣ್ಣಾ ಬಾಂಡ್**

ನಿರ್ದೇಶನ : ಕಿರಣ್ ಬೇಡಿ

ಜನಾರ್ದನ ರೆಡ್ಡಿ ಆತ್ಮಕಥೆ ಆಧಾರಿತ

**ಧನ (ದನಾ) ಧನ**

ಅರವಿಂದ್ ಕೇಜ್ರಿವಾಲ್ ಅರ್ಪಿಸುವ

**ಗೋಲ್ ಮಾಲ್ ಹೈ ಸಬ್ ಗೋಲ್ ಮಾಲ್**

ದೇವೇಗೌಡರ ಕೊನೆಯ ಆಸೆಯನ್ನು ಬಿಂಬಿಸುವ ಮನೋಜ್ಞ ಚಿತ್ರ

**ನಾನು ನನ್ನ ಕನಸು**

ಎಲ್‌ಪಿಜಿ ಸಿಲಿಂಡರ್‌ಗಳ ಬಗ್ಗೆ ಇರುವ ಗೊಂದಲ ನಿವಾರಿಸುವತ್ತ ಒಂದು ದಿಟ್ಟ ಪ್ರಯತ್ನ

**ಗ್ಯಾಸ್ಟ್ರಾನಮಿ**

ಯಡ್ಯೂರಪ್ಪ ಅವರು ಅರ್ಪಿಸುವ

**ನಾನು ಮಾಡಿದ ತಪ್ಪು**



**ಮೌನ ರಾಗ**

ಮನಮೋಹನ್ ಸಿಂಗ್ ಅಭಿನಯದ ಮನಮೋಹಕ ಚಿತ್ರ

ನಿರ್ದೇಶನ : ಸೋನಿಯಾ ಗಾಂಧಿ

ರೂಪಾಯಿ ಬೆಲೆಯ ಬಗ್ಗೆ ಆರ್.ಬಿ.ಐ. ನಿರ್ಮಿತಿ

**ಸ್ಕೈಫಾಲ್**

'ಈಗ' ಚಿತ್ರದ ಮಾದರಿಯಲ್ಲಿ

**ಡೆಂಗೆ ಸೊಳ್ಳೆ**

ಕಥೆ-ಚಿತ್ರಕಥೆ-ನಿರ್ದೇಶನ : ಅರವಿಂದ ಕೇಜ್ರಿವಾಲ್

ಪ್ರಿಯಂಕಾ ಗಾಂಧಿ ನಿರ್ಮಿತಿ

**ಎಲ್ಲರಂಥಲ್ಲ ನನ್ನ ಗಂಡ**

ರಾಬರ್ಟ್ ವಾಡ್ರ ಭೂ ಸಾಧನೆಯ ಬಗ್ಗೆ

ಪ್ರಾಣಿ ಪ್ರೀತಿಯ ಬಗ್ಗೆ ಮನ ಕರಗಿಸುವ ಚಿತ್ರ

**ಏಕ್ ಥಾ ಟಗರು**

ಸ್ವಿಸ್ ಖಾತೆಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವ ಸಾಕ್ಷ್ಯ ಚಿತ್ರ

**ಬ್ಲಾಕ್**

(ಕೋಪ) ತಾಪಮಾನ:
ಬೆಲೆ ಏರಿಕೆಯಿಂದ
ಎಲ್ಲೆಡೆ ಬಿಸಿ; ಸಂಜೆ
ಮಳೆ ಕಾಟ

# ಕೂಗು!

ಅತಿ ಹೆಚ್ಚು ಪ್ರಸಾರ ಹೊಂದಲು ಬಯಸುವ ಪತ್ರಿಕೆ

ಬಿಸಿ ಊಟಕ್ಕೆ ಸಂಪರ್ಕಿಸಿ:
kavala@hotmeal.com

## ಭಾರತ ಇನ್ನು ಮುಂದೆ ಭಾರತ

ದೇಶಕ್ಕೆ ಒಂದು ಹೊಸ ಆಯಾಮ ಕೊಡುವ ಉದ್ದೇಶದಿಂದ ಎಲ್ಲ ಪಕ್ಷಗಳು ತೆಗೆದು ಕೊಂಡಿರುವ ನಿರ್ಧಾರದ ಫಲವಾಗಿ ಭಾರತದ ಹೆಸರನ್ನು ಭಾರತ ಎಂದು ಅಧಿಕೃತ ಭಾಷೆಗಳಲ್ಲಿಯೂ ಮತ್ತು Indiaa ಎಂದು ಇಂಗ್ಲಿಷಿನಲ್ಲಿ ಇನ್ನು ಮುಂದೆ ಬರೆಯಲಾಗುವುದು. ಈ ಬಗ್ಗೆ ಸಂಸತ್‌ನಲ್ಲಿ ಒಂದು ಗೊತ್ತುವಳಿ ಅಂಗೀಕರಿಸಲಾಗುವುದು.

ದೇಶದ ಪ್ರಸಿದ್ಧ ಸಂಖ್ಯಾಶಾಸ್ತ್ರಜ್ಞರು ನೀಡಿರುವ ಸಲಹೆಯ ಮೇರೆಗೆ ಈ ನಿರ್ಧಾರ ತೆಗೆದು ಕೊಂಡಿದ್ದು, ಹೆಸರು ಬದಲಾವಣೆಯಿಂದ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದು ಭಾವಿಸಲಾಗಿದೆ. ಪೆಟ್ರೋಲ್/ಡೀಸೆಲ್ ಬೆಲೆ ಸಮಸ್ಯೆ, ಕಲ್ಲಿದ್ದಲು/ಗಣಿ ಹಗರಣ, ಪಕ್ಷಾಂತರ, ಬರ, ಪ್ರವಾಹ, ಭಯೋತ್ಪಾದನೆ ಹೀಗೆ ದೇಶವನ್ನು ಕಾಡುತ್ತಿರುವ ಎಲ್ಲ ಸಮಸ್ಯೆಗಳಿಗೆ ಈ ನಾಮ ಬದಲಾವಣೆಯಿಂದ ಪರಿಹಾರ ದೊರಕುತ್ತದೆ ಎಂದು ಸಂಖ್ಯಾಶಾಸ್ತ್ರಜ್ಞರು ಆಶ್ವಾಸನೆ ನೀಡಿದ್ದಾರೆ ಎಂದು ಎಲ್ಲ ಬಲ್ಲ ವೃತ್ತಗಳು ತಿಳಿಸಿವೆ.

ಭಾರತ ಮಾತಾಕಿ ಜೈ

ಈ ಸಲಹೆ ಮೊದಲು ಬಂದಿದ್ದು ಭಾಜಪದ ಭವಿಷ್ಯವಾಣಿ ಸಂಪಾದಕರಿಂದ. ಇದನ್ನು ಕಾಂಗ್ರೆಸ್ ಪಕ್ಷದ ಗಮನಕ್ಕೆ ತರಲಾಯಿತು. ಮೊದಲುಮೊದಲು ರಾಹುಲ್ ಗಾಂಧಿ ಒಪ್ಪದಿದ್ದರೂ ಡಿಗ್ಗಿ ಬಾಬ ನಂತರ ಅವರ ಮನವೊಲಿಸಿದರು ಎಂದು ಹೇಳಲಾಗಿದೆ. ರಾಹುಲ್ ಒಪ್ಪಿದರೆ ನನ್ನದೇನೂ ಅಭ್ಯಂತರವಿಲ್ಲ, ಹೇಗಿದ್ದರೂ ದೇಶದ ಭವಿಷ್ಯ ಅವನ(ರ) ಕೈಲಿದೆ ತಾನೆ ಎಂದು ಸೋನಿಯಾ ಗಾಂಧಿ ಪ್ರತಿಕ್ರಿಯಿಸಿದರು ಎಂದು ಪಕ್ಷದ ಸಮೀಪ ವೃತ್ತಗಳು ತಿಳಿಸಿವೆ. ವಾಸ್ತುವಿನ ದೃಷ್ಟಿಯಿಂದಲೂ ಬದಲಾವಣೆಯ ಬಗ್ಗೆ ಯೋಚಿಸಲಾಗಿದ್ದು ಕಾಶ್ಮೀರ ದೇಶದ ಉತ್ತರ ಭಾಗದಲ್ಲಿರುವುದೇ ಎಲ್ಲ ಸಮಸ್ಯೆಗಳಿಗೆ ಕಾರಣ ಎಂದು ಸಂಖ್ಯಾಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿದ್ದರು. ಆದರೆ ಈ ಬಗ್ಗೆ ಏನೂ ಬದಲಾವಣೆ ಸಾಧ್ಯವಿಲ್ಲ, ಆದ್ದರಿಂದ ಹೆಸರು ಬದಲಾವಣೆ ಬಗ್ಗೆ ಸಲಹೆ ನೀಡಲಾಯಿತು ಎಂದು ತಿಳಿದು ಬಂದಿದೆ.

## ಕೋಟಿ ರೂಪಾಯಿ ಮೌಲ್ಯದ ನೋಟು

ಕಲ್ಲಿದ್ದಲು, ಗಣಿ, 2ಜಿ ಮುಂತಾದ ಭಾರಿ (ಅ)ವ್ಯವಹಾರಗಳು ಮತ್ತು ಮುಂದೆ ಬರಬಹುದಾದ ಇನ್ನಷ್ಟು ಭಾರಿ (ಅ)ವ್ಯವಹಾರಗಳನ್ನು ಗಮನದಲ್ಲಿಟ್ಟುಕೊಂಡು 1, 50 ಮತ್ತು 100 ಕೋಟಿ ರೂಪಾಯಿ ಮೌಲ್ಯದ ನೋಟುಗಳನ್ನು ಚಲಾವಣೆಗೆ ಬಿಡಲು ಆರ್.ಬಿ.ಐ. ನಿರ್ಧರಿಸಿದೆ. ಈಗಿರುವ 500, 1000, 5000 ಮತ್ತು 10,000 ರೂ. ನೋಟು ಬಳಸಿ ವ್ಯವಹಾರ ನಡೆಸಲು ತುಂಬಾ ತೊಂದರೆ ಆಗುತ್ತಿದೆ ಎಂದು (ಅ)ವ್ಯವಹಾರ ನಿರತರು ಸರ್ಕಾರಕ್ಕೆ ದೂರು ನೀಡಿದ್ದರಿಂದ ಈ ನಿರ್ಧಾರ ಕೈಗೊಳ್ಳಲಾಯಿತು ಎಂದು ಹೇಳಲಾಗಿದೆ.

ಈಗ ಚಾಲ್ತಿಯಲ್ಲಿರುವ ಹಗರಣಗಳಲ್ಲೇ ನಾವು ಹಣ ಪಾವತಿ ಮಾಡುವುದು ಕಷ್ಟವಾಗುತ್ತಿದೆ. ಎಷ್ಟು ಸೂಟ್ ಕೇಸುಗಳನ್ನು ಬಳಸಿದರೂ ಹಣ ತುಂಬಿಸಿ ರವಾನಿಸಲು ಸಾಧ್ಯವಾಗುತ್ತಿಲ್ಲ. ಸೂಟ್ ಕೇಸುಗಳ ಸಂಖ್ಯೆ ಹೆಚ್ಚುತ್ತಿದ್ದಷ್ಟೂ ರಿಸ್ಕ್ ಹೆಚ್ಚಾಗುತ್ತಿದೆ. ಹವಾಲ ಮಾರ್ಗವನ್ನು ಪೂರ್ತಿ ನಂಬಲು ಸಾಧ್ಯವಾಗುತ್ತಿಲ್ಲ. ಆದುದರಿಂದ 1, 50 ಮತ್ತು 100 ಕೋಟಿ ರೂಪಾಯಿ ಮೌಲ್ಯದ ನೋಟುಗಳನ್ನು ಚಲಾವಣೆಗೆ ತರುವುದರಿಂದ ಅತಿ ಕಡಿಮೆ ಸೂಟ್ ಕೇಸುಗಳನ್ನು ಬಳಸಿ ಅತಿ ಹೆಚ್ಚು ಹಣವನ್ನು ಸಂಬಂಧಿಸಿದವರಿಗೆ ತಲುಪಿಸಲು ಸಾಧ್ಯವಾಗಿದೆ ಎಂದು ಭಾರತೀಯ (ಅ)ವ್ಯವಹಾರಗಳ ವಾಣಿಜ್ಯ ಮಂಡಳಿ ಆರ್.ಬಿ.ಐ. ನಿರ್ಧಾರವನ್ನು ಸ್ವಾಗತಿಸಿದೆ.

1, 50 ಮತ್ತು 100 ಕೋಟಿ ರೂಪಾಯಿ ಮೌಲ್ಯದ ನೋಟುಗಳ ಮೇಲೆ ಮಹಾತ್ಮ ಗಾಂಧಿ ಚಿತ್ರ ಇರುವುದಿಲ್ಲ ಎಂದು ಆರ್.ಬಿ.ಐ. ಸ್ಪಷ್ಟಪಡಿಸಿದೆ. ಬದಲಿಗೆ ಇಂದಿನ ಸಮಾಜದಲ್ಲಿರುವ ಹಲವು ಗಣ್ಯರ ಚಿತ್ರಗಳನ್ನು ಮುದ್ರಿಸಲು ತೀರ್ಮಾನ ಮಾಡಲಾಗಿದ್ದು ಶರದ್ ಪವಾರ್, ಎ ರಾಜ, ಗಾಲಿ ಜನಾರ್ದನರೆಡ್ಡಿ ಇವರನ್ನು ಒಳಗೊಂಡ ಸಮಿತಿ ಯಾರ ಚಿತ್ರಗಳನ್ನು ಮುದ್ರಿಸಬೇಕು ಎಂಬುದರ ಬಗ್ಗೆ ಸಲಹೆಗಳನ್ನು ನೀಡಲಿದೆ ಎಂದು ತಿಳಿದು ಬಂದಿದೆ.

## ಸಿ.ಬಿ.ಐ. ರೈಡ್

ಇಂದು ನಡೆದ ರಹಸ್ಯ ಕಾರ್ಯಾಚರಣೆಯಲ್ಲಿ ಸಿಬಿಐ ತಂಡವೊಂದು ಬರೇ ಪ್ರಾಮಾಣಿಕ ಅಧಿಕಾರಿಗಳೇ ಇದ್ದ ಸರ್ಕಾರಿ ಕಚೇರಿಯೊಂದನ್ನು ಪತ್ತೆ ಹಚ್ಚಿದೆ. ಸರ್ಕಾರ ಅಸ್ತಿತ್ವಕ್ಕೆ ಬಂದಾಗಲಿನಿಂದ ಇದುವರೆಗೂ ಅದರ ಸಿಬ್ಬಂದಿ ಒಂದು ಪೈಸೆ ಸಹ ಲಂಚ ಪಡೆದಿಲ್ಲ ಎಂದು ಹೇಳಲಾಗಿದೆ.

ಈ ಇಲಾಖೆ ಖರ್ಚು ಮಾಡಿರುವ ಪ್ರತಿ ಪೈಸೆಗೂ ಸಹ ಲೆಕ್ಕ ಇಡಲಾಗಿದ್ದು ಆ ಸಿಬ್ಬಂದಿ ಶೇ 100ರಷ್ಟು ಪ್ರಾಮಾಣಿಕರಾಗಿರುವ ಸಂಗತಿ ಬೆಳಕಿಗೆ ಬಂದು ಇತರ ಸರ್ಕಾರಿ ಇಲಾಖೆಗಳನ್ನು ಬೆಚ್ಚಿ ಬೀಳಿಸಿದೆ. ಒಂದು ಅಂದಾಜಿನಂತೆ ಈ ಅಧಿಕಾರಿಗಳು ಯಾವುದೇ ಹಗರಣದಲ್ಲಿ ಭಾಗಿಯಾಗಿಲ್ಲದಿರುವುದರಿಂದ ಸುಮಾರು 420 ಕೋಟಿ ರೂ.ಗಳಷ್ಟು ಸಂಭವನೀಯ ನಷ್ಟ ಅನುಭವಿಸಿದೆ ಎಂದು ತಿಳಿದು ಬಂದಿದೆ.

ಈ ಇಲಾಖೆಯ ಬಗ್ಗೆ ವಿವರಗಳನ್ನು ಅದರ ಪ್ರಾಮಾಣಿಕ ಸಿಬ್ಬಂದಿಯ ಹಿತದೃಷ್ಟಿಯಿಂದ ಸಿಬಿಐ ಗೋಪ್ಯವಾಗಿಟ್ಟಿದೆ.

ಇದಕ್ಕೆ ಪ್ರತಿಕ್ರಿಯಿಸಿದ ಹೆಸರು ಹೇಳಲು ಬಯಸಿದ ಭ್ರಷ್ಟ ಸರ್ಕಾರಿ ಅಧಿಕಾರಿ ಕುಕು ಘೋಷ್ ''ಇದೊಂದು ಗಂಭೀರ ಸಮಸ್ಯೆ. ಈ ಮಂದಿ ಒಂದು ರೂಪಾಯಿ ಸಹ ಲಂಚ ಪಡೆದಿಲ್ಲ ಎಂದರೆ ಏನರ್ಥ?'' ಎಂದು ಉದ್ವೇಗದಿಂದ ನುಡಿದರು. ನಮ್ಮಂತೆಯೇ ಅವರೂ ಸಹ ಇದ್ದಿದ್ದರೆ ಅವರುಗಳ ಬ್ಯಾಂಕ್ ಖಾತೆಗಳಿಗೆ ಅನಾಯಾಸವಾಗಿ 420 ಕೋಟಿ ರೂ. ಜಮಾ ಆಗುತ್ತಿತ್ತು. ಅವರು ನೆಮ್ಮದಿಯಿಂದ ಇರಬಹುದಿತ್ತು. ಈಗವರು ಸಾಧಿಸಿರುವುದಾದರೂ ಏನು ಎಂದು ಕೋಪದಿಂದ ಕೇಳಿದರು. ಸರ್ಕಾರಿ ಹಣವನ್ನು ಸರ್ಕಾರದ ಯೋಜನೆಗಳಿಗೇ ಶೇ 100ರಷ್ಟು ಬಳಸುವುದೆಂದರೆ ಏನರ್ಥ? ಎಂದು ಅವರು ಹೇಳಿದಾಗ ಅವರ ಧ್ವನಿ ಕೋಪದಿಂದ ನಡಗುತ್ತಿತ್ತು.

ಕುಕು ಘೋಷ್ ಅವರ ಸಹೋದ್ಯೋಗಿ ನಾನಾಲಾಲ್ ಅವರು ಮಾತನಾಡುತ್ತಾ ತಾವು ಯಾರೂ ಆ ಇಲಾಖೆಯ ಸಿಬ್ಬಂದಿಯ ಮೇಲೆ ಏನೂ ಪ್ರಭಾವ ಬೀರಲು ಆಗದಿದ್ದಕ್ಕೆ ವಿಷಾದ ವ್ಯಕ್ತಪಡಿಸಿದರು. ಟೇಬಲ್ ಕೆಳಗಿನ ವ್ಯವಹಾರ ಎಲ್ಲೆಡೆ ವ್ಯಾಪಿಸಿದ್ದರೂ ಈ ಇಲಾಖೆ ಮಾತ್ರ ಅದರ ವ್ಯಾಪ್ತಿಯಿಂದ ಹೊರಗೇ ಇದ್ದುದಕ್ಕೆ ನಮಗೆಲ್ಲ ಬೇಸರವಾಗಿದೆ. ಎಲ್ಲರೂ ನಮ್ಮಂತೆಯೇ ಇರುತ್ತಾರೆ ಎಂದು ನಾವು ಭಾವಿಸಿರುವುದು ತಪ್ಪು. ಈ ಬಗ್ಗೆ ನಮ್ಮ ಸಂಘ ತೀವ್ರ ಕ್ರಮ ಕೈಗೊಂಡು ಅಂತಹವರನ್ನೂ ಸಹ ಮುಖ್ಯವಾಹಿನಿಗೆ ತರಲು ಶ್ರಮಿಸಬೇಕು ಎಂದು ಕಳಕಳಿಯಿಂದ ಹೇಳಿದರು.

ಸಾಧ್ಯವಾದರೆ ಸಿಬಿಐ ಅಧಿಕಾರಿಗಳಿಗೆ ಲಂಚ ನೀಡಿ ಆ ಇಲಾಖೆಯ ಬಗ್ಗೆ ವಿವರಗಳನ್ನು ಪಡೆದು ಆ ಸಿಬ್ಬಂದಿಯ ಮನಪರಿವರ್ತನೆಗೆ ಪ್ರಯತ್ನಿಸಲು ಸಂಘದ ಪದಾಧಿಕಾರಿಗಳು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು.

ಸ್ವಾತಂತ್ರ್ಯ ಬಂದು 65 ವರ್ಷಗಳಾದರೂ ನಾವು ಆ ಇಲಾಖೆಯನ್ನು ಪರಿವರ್ತನೆ ಮಾಡಲಾಗದಿರುವುದು ವಿಷಾದನೀಯ. ತಲೆತಗ್ಗಿಸುವಂತಹ ಸಂಗತಿ. ಅವರಿಂದ ಇತರರು ಪ್ರಭಾವಗೊಂಡಿಲ್ಲದಿರುವುದು ಒಂದು ಸಮಾಧಾನದ ಸಂಗತಿ ಎಂದು ಘೋಷ್ ನಿಟ್ಟುಸಿರುಬಿಟ್ಟರು.

# ಪಾರ್ಲಿಮೆಂಟಿನ ಹೆಗ್ಗಣ ಕಿವುಡು

**- ಎನ್. ರಾಮನಾಥ್**

ಇನ್ನು ಕೆಲವು ವರ್ಷಗಳಲ್ಲಿ ಭಾರತದಲ್ಲಿ ಖಿನ್ನತೆಗೆ ಒಳಗಾಗುವವರ ಸಂಖ್ಯೆ ಹೆಚ್ಚುತ್ತದಂತೆ. ಆ ವಿಷಯದ ಬಗ್ಗೆ ಪ್ರಯೋಗದಲ್ಲಿ ತೊಡಗಿದ ಏಐಐಎಂಎಸ್ ವೈದ್ಯರು ಒಂದು ಕೌತುಕದ ಸಂಗತಿಯನ್ನು ಬಹಿರಂಗಪಡಿಸಿದ್ದಾರೆ!

ಪಾರ್ಲಿಮೆಂಟಿನಲ್ಲಿರುವ ಹೆಗ್ಗಣಗಳಿಗೆ ಸರಿಯಾಗಿ ಕಿವಿ ಕೇಳಿಸುವುದಿಲ್ಲ!!!

''ನಮಗೂ ಗೊತ್ತು ಎಂದಿರಾ?''

ನಿಲ್ಲಿ ಸ್ವಾಮಿ, ಅವರು ಹೇಳುತ್ತಿರುವುದು ಎರಡು ಕಾಲಿನ, ಮನುಷ್ಯ ಜಾತಿಗೆ ಸೇರಿದ ಹೆಗ್ಗಣಗಳ ಬಗ್ಗೆ ಅಲ್ಲ, ಮೂಷಿಕ ಜಾತಿಯ ಹೆಗ್ಗಣಗಳ ಬಗ್ಗೆ!!!

ಈ ಆಸ್ಪತ್ರೆಯ ವೈದ್ಯರು ಒಂದು ವಿಶಿಷ್ಟವಾದ ಪ್ರಯೋಗದಲ್ಲಿ ತೊಡಗಿದ್ದರು. ಪ್ರಯೋಗದ ಉದ್ದೇಶ ಮನುಷ್ಯನಲ್ಲಿ ಸಂಭವಿಸುವ ಖಿನ್ನತೆಯನ್ನು ಹತೋಟಿಗೆ ತರುವ ಸಲುವಾಗಿ ತಯಾರಿಸಿದ್ದ ಔಷಧಿ ಎಷ್ಟು ಪರಿಣಾಮಕಾರಿ ಎಂದು ತಿಳಿಯುವುದಾಗಿತ್ತು.

ತತ್ಸಂಬಂಧಿತವಾಗಿ ಹೆಗ್ಗಣಗಳ ಗುಂಪೊಂದನ್ನು ಒಟ್ಟು ಮಾಡಿದರು. ಅವಕ್ಕೆ ಸ್ಪಷ್ಟವಾಗಿ ಕೇಳಿಸುವ ರೀತಿಯಲ್ಲಿ ಬೆಕ್ಕಿನ 'ಮಿಯಾಂವ್' ಸದ್ದನ್ನು ಹೊರಡಿಸಿದರು. ಗುಂಪಿನ ಬಹುತೇಕ ಹೆಗ್ಗಣಗಳು ಹೆದರಿ, ಖಿನ್ನವಾಗಿ, ಗಾಬರಿಯಿಂದ ದಿಕ್ಕಾಪಾಲಾಗಿ ಓಡಿದವು. ಆದರೆ ಮೂರು ಹೆಗ್ಗಣಗಳು ಮಾತ್ರ (ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಹೆಗ್ಗಣಗಳು ಅಲ್ಲ ಸ್ವಾಮಿ) ಬೆಕ್ಕಿನ ಧ್ವನಿಯನ್ನೂ ಲೆಕ್ಕಿಸದೆ ಸಂತೋಷದಿಂದ ಸಿಕ್ಕಿದ್ದನ್ನು ಕಬಳಿಸುತ್ತಾ ಕುಳಿತಿದ್ದವು.

ನಂತರ ಆ ಮೂರು ಹೆಗ್ಗಣಗಳನ್ನೇ ಬೇರೆ ಇರಿಸಿ ಮತ್ತೆ ಬೆಕ್ಕಿನ ಸದ್ದನ್ನು ಹೊರಡಿಸಿದರು. ಊಹೂಂ! ಈಗಲೂ ಆ ಹೆಗ್ಗಣಗಳು ಯಾವುದೇ ಪ್ರತಿಕ್ರಿಯೆಯನ್ನು ತೋರಲಿಲ್ಲ. ಕಡೆಗೆ ಡಾ. ಛೋಪ್ರಾ ಬೆಕ್ಕಿನ ಮುಖವಾಡವನ್ನು ಧರಿಸಿ ಆ ಹೆಗ್ಗಣಗಳ ಮುಂದೆ ಹಾಜರಾದರು. ಅವರನ್ನು ಕಂಡದ್ದೇ ತಡ, ಆ ಮೂರೂ ಹೆಗ್ಗಣಗಳು ಸತ್ತೆನೋ, ಕೆಟ್ಟೆನೋ ಎಂದು ಅರಚುತ್ತಾ ವೇಗವಾಗಿ ಓಡಿಹೋದವು!

''ಅವಕ್ಕೆ ಕಣ್ಣು ಕಾಣಿಸುತ್ತದೆ, ಕಿವಿ ಮಾತ್ರ ಕೇಳಿಸಲ್ಲ'' ಎಂದು ಛೋಪ್ರಾ ಅಭಿಪ್ರಾಯಪಟ್ಟರು. ಆ ಮೂರೂ ಹೆಗ್ಗಣಗಳು ಕಿವುಡಾಗಿದ್ದವು. ಪ್ರಯೋಗ ಮುಂದುವರಿದಂತೆ ಮತ್ತಷ್ಟು ಅಂತಹ ಕಿವುಡು ಹೆಗ್ಗಣಗಳು ಕಂಡುಬಂದವು. ಈ ಕುತೂಹಲಕಾರಿ ಅಂಶದ ಮೇಲೆ ಬೆಳಕು ಚೆಲ್ಲಲು ಆ ಹೆಗ್ಗಣಗಳು ಎಲ್ಲಿಂದ ಬಂದವು ಎಂದು ಅರಿಯಲು ದಾಖಲೆಗಳನ್ನು ತರಿಸಿ ನೋಡಲಾಯಿತು. ಅವರಿಗೆ ಅಚ್ಚರಿ ಮತ್ತು ದಿಗ್ಭ್ರಮೆ ಕಾದಿತ್ತು!

ಆ ಎಲ್ಲಾ ಹೆಗ್ಗಣಗಳನ್ನೂ ಹಿಂದಿನ ವಾರ ಪಾರ್ಲಿಮೆಂಟಿನ ಆಸುಪಾಸಿನಿಂದಲೇ ಹಿಡಿದು ತರಲಾಗಿತ್ತು!

''ವಾಸ್ತವವಾಗಿ ಆ ಹೆಗ್ಗಣಗಳು ಲೋಕಸಭೆ ಮತ್ತು ರಾಜ್ಯಸಭೆಯ ಅಂತಸ್ತುಗಳ ಕೆಳಗೆಯೇ ವಾಸ ಮಾಡುತ್ತಿದ್ದವು'' ಎನ್ನುತ್ತಾರೆ ಡಾ. ಛೋಪ್ರಾ. ''ನಂತರದಲ್ಲಿ ನಮಗೆ ಕಳುಹಿಸಿದ ಇಲಿಬೋನಿನಲ್ಲಿಟ್ಟಿದ್ದ ಬ್ರೆಡ್ ತುಣುಕುಗಳ ಜೊತೆ ಲೋಕ್‌ಪಾಲ್ ಬಿಲ್ ಮತ್ತು ಮಹಿಳಾ ಮೀಸಲಾತಿ ಬಿಲ್‌ಗಳ ತುಣುಕುಗಳೂ ಕಂಡುಬಂದವು.''

ಹೆಗ್ಗಣಗಳು ಕಿವುಡಾದುದು ಏಕೆ ಎಂಬುದರ ಬಗ್ಗೆ ಸಂಶೋಧನೆ ಮುಂದುವರೆದಿದೆ. ಈ ಬಗ್ಗೆ ಎರಡು ಸಿದ್ಧಾಂತಗಳು ಹಬ್ಬಿಕೊಂಡಿವೆ ಈ ಹೆಗ್ಗಣಗಳಿಗೆ ಎಂಪಿಗಳು ದಿನವೂ ಅರಚುವ ಸ್ಲೋಗನ್‌ಗಳ ಸದ್ದಿನ ತೀವ್ರತೆ ತಡೆಯಲಾಗದೆ ಕಿವುಡಾಗಿವೆ ಅಥವಾ ಎಂಪಿಗಳು ತಿಂದುಂಡು ಬಿಟ್ಟ ಆಹಾರವನ್ನು ಸೇವಿಸಿದುದರಿಂದ ಎಂಪಿಗಳ ಬುದ್ಧಿಯೇ ಇವುಗಳಿಗೂ ಬಂದಿದೆ!

''ಎಂಪಿಗಳಂತೆಯೇ ಅವು ತಮ್ಮ ಸುತ್ತ ಇರುವ ಎಲ್ಲವನ್ನೂ ನೋಡಬಲ್ಲವು, ಆದರೆ ಏನೂ ಕೇಳಿಸದಂತಿರುತ್ತವೆ, ಯಾವುದಕ್ಕೂ ಪ್ರತಿಕ್ರಿಯೆ ತೋರದೆ ಇರುತ್ತವೆ'' ಎನ್ನುತ್ತಾರೆ ಡಾ. ಛೋಪ್ರಾ!

**ಆಧಾರ: ಅನ್‌ರಿಯಲ್ ಟೈಂಸ್**

## ವಾಚ್ - ಕ್ಲಾಕ್

ರಂಗನಾಥ ಶರ್ಮಾ ಅವರು ಬಸವನಗುಡಿಯಲ್ಲಿ ಡಿವಿಜಿ ಅವರ ಮನೆಯ ಬಳಿಯೇ ಇದ್ದರು. ತಮ್ಮ ಮನೆಯ ಬಳಿಗೇ ಒಬ್ಬರು ವಿದ್ವಾಂಸರು ಬಂದಿದ್ದಾರೆ ಎಂಬ ವಿಷಯವನ್ನು ತಿಳಿದ ಡಿವಿಜಿ ಅವರೇ ಶರ್ಮಾ ಅವರನ್ನು ತಮ್ಮ ಮನೆಗೆ ಕರೆಸಿಕೊಂಡರು. ಬಳಿಕ ಅವರ ಸ್ನೇಹ ಗಟ್ಟಿಯಾಯಿತು. ಬಿಡಿಸಲಾಗದ ಬಂಧವಾಯಿತು. ಡಿವಿಜಿಯವರ ಬಹುತೇಕ ಎಲ್ಲ ಸಾಹಿತ್ಯಗಳಲ್ಲಿಯೂ ಶರ್ಮಾ ಅವರ ಸಲಹೆ ಸೂಚನೆಗಳಿರುತ್ತಿದ್ದವು. ಡಿವಿಜಿ ಜೀವನ ಧರ್ಮ ಯೋಗ ಬರೆದಾಗ ಅದರ ಮೊದಲ ಓದುಗರು ಶರ್ಮಾ ಅವರೇ ಆಗಿದ್ದರು. ಡಿವಿಜಿ ಅವರು ರಂಗನಾಥ ಶರ್ಮಾ ಅವರನ್ನು ಬಾಯಿತುಂಬಾ 'ಪಂಡಿತರೇ' ಎಂದು ಕರೆಯುತ್ತಿದ್ದರು.

ಡಿವಿಜಿ ಅವರಿಗೆ ತಿಂಡಿ ತಿನಿಸುಗಳನ್ನು ತಿನ್ನುವುದೆಂದರೆ ಬಹು ಪ್ರೀತಿ. ಶರ್ಮಾ ಅವರು ಮಿತ ಆಹಾರಿ. ಡಿವಿಜಿ ಮನೆಗೆ ಹೋದಾಗಲೆಲ್ಲಾ ಶರ್ಮಾ ಅವರಿಗೆ ಬೋಂಡಾ ಸೇವೆ ಲಭ್ಯವಾಗುತ್ತಿತ್ತು. ಒಮ್ಮೆ ಇಬ್ಬರ ಮುಂದೆ ಬೋಂಡಾದ ಬಟ್ಟಲು ಬಂದು ಕುಳಿತಾಗ ಎಷ್ಟು ಒತ್ತಾಯಿಸಿದರೂ ಶರ್ಮಾ ಅವರು ಒಂದಕ್ಕಿಂತ ಹೆಚ್ಚು ಬೋಂಡ ತಿನ್ನಲಿಲ್ಲ. ಆಗ ಡಿವಿಜಿ ''ಪಂಡಿತರೇ ನಿಮ್ಮ ಹೊಟ್ಟೆ ಲೇಡೀಸ್ ರಿಸ್ಟ್ ವಾಚ್. ನನ್ನದಾದರೋ ವಾಲ್ ಕ್ಲಾಕ್'' ಎಂದು ಹಾಸ್ಯ ಮಾಡಿದ್ದರು.

ಒಮ್ಮೆ ಶರ್ಮಾ ಅವರು ತಮ್ಮ ಹಲ್ಲುನೋವಿನ ಚಿಕಿತ್ಸೆಗಾಗಿ ಹೊರಟು ದಾರಿಯಲ್ಲಿ ಡಿವಿಜಿ ಅವರನ್ನು ಕಂಡಾಗ ಡಿವಿಜಿ ವಿನೋದಕ್ಕಾಗಿ ''ಏಕದಂತಸ್ಯ ವೈ ಕುರ್ಯಾದದ್ಯ ವೊ ದಂತ ಮಂಗಲಂ'' (ಆ ಏಕದಂತ ಗಣಪತಿಯು ಇಂದು ನಿಮ್ಮ ಹಲ್ಲನ್ನುಕಾಪಾಡಲಿ) ಎಂದು ಹರಸಿ ಕಳುಹಿಸಿದರಂತೆ. ಚಿಕಿತ್ಸೆ ಪಡೆದು ಹಿಂತಿರುಗಿದ ಶರ್ಮರು ಗುಂಡಪ್ಪ ಅವರನ್ನು ಕಂಡು ''ಅಸೂಯಯೈವ ಭಗವಾನ್ ದಂತದ್ವಯಮಪಾಹರತ್'' (ತಾನು ಒಂಟಿ ಹಲ್ಲಿನವನೆಂಬ ಅಸೂಯೆಯಿಂದ ಆ ವಕ್ರದಂತನು ನನ್ನ ಎರಡು ಹಲ್ಲುಗಳನ್ನು ಕೀಳಿಸಿದನು) ಎಂದು ಉತ್ತರಿಸಿ ಡಿವಿಜಿ ಈ ಹಿಂದೆ ರಚಿಸಿದ್ದ ಶ್ಲೋಕವನ್ನು ಪೂರ್ಣಗೊಳಿಸಿದ್ದರಂತೆ.

**ಸೌಜನ್ಯ: ಪ್ರಜಾವಾಣಿ**

# ನೀರಿಲ್ಲದ ಸುಖ

– ಜಲಜ



ಅದೆಷ್ಟೋ ಸ್ಟೇಜುಗಳಲ್ಲಿ ಕಾವೇರಿಯನ್ನು ಬೆಂಗಳೂರಿಗೆ ತಂದರೂ ಜಲದರ್ಶಿನಿ ಲೇಔಟ್ ಸೇರಿದಂತೆ ಅನೇಕ ಬಡಾವಣೆಗಳಲ್ಲಿ ನೀರಿನ ಸಮಸ್ಯೆ ಮತ್ತಷ್ಟು ಉಲ್ಬಣಿಸಿದ್ದು ಆ ಜನಗಳನ್ನು ಸಂದರ್ಶಿಸಿ ಲೇಖನ ಬರೆಯಿರಿ ಎಂದು ಅಪರಂಜಿ ಸಂಪಾದಕರು ಮಿನರಲ್ಲ ವಾಟರ ಕುಡಿಯುತ್ತಾ ಹೇಳಿದ್ದರಿಂದ ನಾನು ಫೀಲ್ಡಿಗೆ ಇಳಿದೆ.

ಮೊದಲು ಸಿಕ್ಕಿದ್ದು ಒಬ್ಬ ಗೃಹಿಣಿ. ''ನೀರಿನ ಸಮಸ್ಯೆಯಿಂದ ಚಲೋ ಆಗಿದೇರಿ. ನಮ್ಮತ್ತೆ ಮಾವ ವಾರಗಟ್ಟಲೆ ಬಂದು ಇಲ್ಲಿ ಕೂಡಿ ನಮಗೆ ಬಾಳ ತ್ರಾಸ ಕೊಡ್ತಿದ್ದರಿ. ಈಗ ನೀರಿಲ್ಲ ಎಂದು ಬರೋದಿಲ್ಲರಿ. ಅದನ್ನು ನೋಡಿ ನಮ್ಮ ನೆಂಟ್ರು ಸಹ ಈ ಕಡೆ ಬರ್ತಿಲ್ರಿ. ನಮಗೆ ಚಲೋ ಆಗಿದೆರಿ'' ಎಂದರು ಧಾರವಾಡದ ಕಡೆಯ ಆಕಿ.

''ಕೆಲಸ ಕಡಿಮೆ ಆಗಿದೆ. ಮೊದಲು ನೀರಿತ್ತು ಎಂದು ಹುಡುಕಿ ಹುಡುಕಿ ತೊಳೆಯೋದಿಕ್ಕೆ ಪಾತ್ರೆಗಳನ್ನು ಹಾಕ್ತಿದ್ದರು. ಈಗ ನಾಲ್ಕು ಪಾತ್ರೆ ಅಷ್ಟೆ ಅಂಗೇ ಬಟ್ಟೆ ಸಹ ಕಡಿಮೆ. ಅದೇನೋ ಹೇಳ್ತಾರಲ್ಲ ಹಾಸಿಗೆ ಇದ್ದಷ್ಟು ಕಾಲು ಚಾಚು ಅಂತ ಅಂಗೇಯ ನೀರಿದ್ದಷ್ಟು ಕೆಲಸ ಮಾಡು ಅಂಗೆ ಆಗಿದೆ. ಒಳ್ಳೆದೇ ಆಯ್ತು. ಆದರೆ ಸಂಬಳ ಮಾತ್ರ ಕಡಿಮೆ ಆಗಿಲ್ಲ'' ಎಂದು ನಿಂಗಿ ಖುಷಿ ಖುಷಿಯಿಂದ ಹೇಳಿದಳು.

ಅವರ ಮನೆ ಪುಟಾಣೀನೆ ಇರಬೇಕು ಖುಷಿಯಿಂದಿದ್ದ ''ಯಾಕೋ ಮರಿ? ಹೋಂ ವರ್ಕ್ ಇಲ್ಲವಾ?'' ಎಂದು ಕೇಳಿದರೆ ಅದಲ್ಲಾ ಅಂಕಲ್, ''ನಾನು ಬೇಡ ಬೇಡ ಎಂದು ಎಷ್ಟು ಹಠ ಮಾಡಿದರೂ ನಮ್ಮ ಮಮ್ಮಿ ವಾರಕ್ಕೊಮ್ಮೆ ಎಣ್ಣೆ ನೀರು ಹಾಕ್ತಿದ್ದರು. ಈಗ ಎರಡು ದಿನಕ್ಕೊಮ್ಮೆ ಆರ್ಡಿನರಿ ಸ್ನಾನ ಮಾಡು ಸಾಕು ಅಂತಾರೆ'' ಎಂದ.

ಆಗ ಅಲ್ಲಿಗೆ ಒಬ್ಬ ಪಾತ್ರೆ ವ್ಯಾಪಾರಿ ಬಂದ. ಅವನ್ನ ಕೇಳಿದೆ. ''ಬಹುತ್ ಅಚ್ಛಾ ಹೈ ಸಾಬ್, ನನ್ನ ಹತ್ರ ಖರ್ಚಾಗದೆ ಉಳಿದಿದ್ದ ಎಲ್ಲಾ ದೊಡ್ಡ ದೊಡ್ಡ ಪಾತ್ರೆಗಳೆಲ್ಲ ಖರ್ಚಾಗಿ ಹೋಗಿದೆ ಸಾಬ್'' ಎಂದ. ಅರೆ ನೀರೇ ಇಲ್ಲ ದೊಡ್ಡ ಪಾತ್ರೆ ಯಾಕೆ ಬೇಕು? ಎಂದೆ. ''ಅದೇ ಸಾಬ್ ಟ್ಯಾಂಕರ್ ಬಂದಾಗ ಅದ್ರಲ್ಲಿ ಹಿಡಿದು ಇಟ್ಟುಕೊಳೋಕೆ ಬೇಕಲ್ಲ'' ಎಂದಾಗ ಅವನ ಕ್ಲೀಯರೆನ್ಸ್ ಸೇಲ್ ಅರ್ಥ ಆಯಿತು.

ಒಬ್ಬ ಮನೆ ಮಾಲೀಕ ಸಿಕ್ಕಿದ. ಹೇಗಿದೆ ಸ್ಥಿತಿ? ಎಂದೆ. ''ಬಹಳ ವರ್ಷಗಳಿಂದ ನಮ್ಮ ಟೆನೆಂಟ್ ಮನೆ ಖಾಲಿ ಮಾಡದೆ ಸತಾಯಿಸುತ್ತಿದ್ದ. ಈಗ ನೀರಿಲ್ಲ ಅಂತ ಅವನೇ ಖಾಲಿ ಮಾಡಿ ಹೋದ. ಅದನ್ನ ಡಿಮಾಲಿಷ್ ಮಾಡಿ ಅಪಾರ್ಟಮೆಂಟ್ ಕಟ್ಟಿಸ್ತೀನಿ'' ಎಂದು ಬಹುಬಾಡಿಗೆಯ ಕನಸು ಕಾಣತೊಡಗಿದ.

ಸಂದರ್ಶನ ಸಾಕೆನಿಸಿತು. ನೀರಿಲ್ಲದಿದ್ದರೂ ಎಲ್ಲರೂ ಖುಷಿಯಿಂದ ಇದ್ದಾರೆ ಎಂದುಕೊಂಡು ಜಲಮಂಡಳಿಗೆ ಫೋನ್ ಮಾಡಿದೆ. ''ಜನರನ್ನು ಖುಷಿಯಿಂದ ಇಡುವುದೇ ನಮ್ಮ ಏಕೈಕ ಗುರಿ'' ಎಂದರು ಆ ಕಡೆಯಿಂದ ಯಾರೋ. ಅವರ ಜಲಮಂಡಳಿ ಕ್ವಾರ್ಟರ್ಸನಲ್ಲಿ ನೀರೇ ನಿಲ್ಲಲ್ಲ ಎಂಬುದು ಬೇರೆಯ ಸಂಗತಿ.

### ಒಂದೇ ಕಣ್ಣಿನ ಗುರುತು

ಕಳ್ಳನನ್ನು ಹುಡುಕುತ್ತಾ ಬಂದ ಒಬ್ಬ ಪೋಲೀಸಿನವನು ಎದುರಿಗೆ ಕಂಡ ಒಬ್ಬ ಸರದಾರಜಿಗೆ ಕಳ್ಳನ ಚಿತ್ರ ತೋರಿಸಿ ಇವನನ್ನು ನೀನು ಎಲ್ಲಾದರೂ ನೋಡಿದೀಯ? ನೋಡಿದ್ದರೆ ಗುರುತು ಹಿಡೀತೀಯ ಅಂತ ಕೇಳಿದ. ಕಳ್ಳನ ಚಿತ್ರ ನೋಡಿ ಸರದಾರಜಿ ಹೇಳಿದ. ತುಂಬಾ ಸಿಂಪಲ್. ಇವನಿಗೆ ಒಂದೇ ಕಣ್ಣಿದೆ. ಪೋಲೀಸು ಸಿಟ್ಟಿನಿಂದ ಅದು ಒಂದು ಪಕ್ಕದಿಂದ ತೆಗೆದಿರೋ ಚಿತ್ರ ಅಂದು ರೇಗಿ ಮುಂದೆ ಹೋಗಿ ಅವನ ಗ್ರಹಚಾರಕ್ಕೆ ಎದುರಾದ ಇನ್ನೊಬ್ಬ ಸರದಾರಜಿಯನ್ನು ಕೇಳಿದ. ಆ ಸರದಾರಜಿ ಕಳ್ಳನ ಫೋಟೋ ನೋಡಿ ಇವನನ್ನು ಬಹಳ ಸುಲಭವಾಗಿ ಕಂಡುಹಿಡಿಯಬಹುದು. ಹೇಗೆಂದರೆ, ಇವನಿಗೆ ಒಂದೇ ಕಿವಿ ಇದೆ ಅಂದ. ಅದು ಪೋಲೀಸಿನವನಿಗೆ ಇನ್ನಷ್ಟು ಸಿಟ್ಟು ತರಿಸಿತು. ನಮ್ಮ ಸರದಾರಜಿಗಳು ಪೋಲೀಸಿನವರ ಹತ್ರ ಏನು ಮಾಡ್ತಾ ಇದಾರೆ ಅಂತ ಅಲ್ಲಿಗೆ ಮೂರನೇ ಸರದಾರಜಿ ಬಂದ. ಪೋಲೀಸಿನವನು ಅವನಿಂದೇನಾದರೂ ಸುಳಿವು ಸಿಗಬಹುದು ಅಂತ ಅವನನ್ನು ಈ ಕಳ್ಳನನ್ನು ಎಲ್ಲಾದರೂ ನೋಡಿದೀಯಾ ಅಂತ ಕೇಳಿದ. ಅದಕ್ಕೆ ಮೂರನೆ ಸರದಾರಜಿ ಫೋಟೋವನ್ನು ಸ್ವಲ್ಪ ಹೊತ್ತು ನೋಡಿ ಈ ಕಳ್ಳ ಕಾಂಟಾಕ್ಟ್ ಲೆನ್ಸ್ ಹಾಕ್ಕೊಂಡಿದಾನೆ ಅಂದ. ಪೋಲೀಸಿಗೆ ಅಚ್ಚರಿ. ರೆಕಾರ್ಡ್ ತೆಗೆದು ನೋಡಿದರೆ ಹೌದು ಕಳ್ಳ ಕಾಂಟಾಕ್ಟ್ ಲೆನ್ಸ್ ಹಾಕ್ಕೊಂಡಿದಾನೆ. ಖುಷಿಯಿಂದ ಪೋಲೀಸಿವನು ನಿನಗೆ ಹೇಗೆ ಗೊತ್ತಾಯ್ತು ಅಂತ ಕೇಳಿದರೆ ಮೂರನೇ ಸರದಾರಜಿ ಹೇಳಿದ ತುಂಬಾ ಸಿಂಪಲ್ ಅವನಿಗೆ ಒಂದೇ ಕಣ್ಣಿದೆ ಕನ್ನಡಕ ಹೇಗೆ ಹಾಕ್ಕೊತಾನೆ ಅಂದಾಗ ಪೋಲೀಸು ಮೂರ್ಛೆಹೋದ.

– ಸುಕೇಶವ

# ಕವಳಾವಲೋಕನ

**ಕಂಬಿಕಿತ್ತ ಕೃಷ್ಣಮೂರ್ತಿ ಅವರ ಮನೆ ಊಟ**

ನಿಮಿತ್ತ: **ಅವರ ಷಷ್ಟ್ಯಬ್ದಿ**

ಅಡುಗೆಯವರು: **ಬಲರಾಮ ಮತ್ತು ಸಂಗಡಿಗರು, ರಸಗವಳ ಗ್ರೂಪ್**



**ನಿಂ**ತು ತಿನ್ನುವ ಅಹಿಂದೂ ಬಫೆ (ಬುಫೆ?) ಪದ್ಧತಿ ಬದಲು ಅಗ್ರ ಇರುವ ಭರ್ಜರಿ ಬಾಳೆ ಎಲೆಗಳ ಎದುರು ಎಲ್ಲರನ್ನೂ ಕೂಡಿಸಿದಾಗಲೇ ಭರ್ಜರಿ ಊಟದ ವಾಸನೆ ಹೊಡೆದಿತ್ತು. ಅಡುಗೆ ಹೇಗಾದರೂ ಇರಲಿ ಸದ್ಯ ಕೂತು ತಿನ್ನಬಹುದಲ್ಲ ಎಂದುಕೊಂಡವರೂ ಸಹ ಬಾಯಿ ಚಪ್ಪರಿಸಿ ಬಾರಿಸಿದ್ದು ಬಸ್ರೂರು ಬಲರಾಮ ಮತ್ತು ಸಂಗಡಿಗರ ಬಾಣಸಿಗರ ಕಲಾ ಪ್ರತಿಭೆಗೆ ಸಾಕ್ಷಿ ಆಗಿತ್ತು. ಈ ಅಡುಗೆಯನ್ನು ಹೊಗಳು ಪ್ರಾರಂಭಿಸುವುದು ಬೆತ್ತಲೆ ಮನುಷ್ಯನ ಮೇಲೆ ಕುಳಿತ ಸೊಳ್ಳೆಗಾದ ಅನುಭವದಂತೆ. 'ಎಲ್ಲಿಂದ ಪ್ರಾರಂಭಿಸಲಿ?' ಎಂಬ ಚಿಂತೆ ಸೊಳ್ಳೆಗಾದಂತೆ ಈ ಊಟದ ವರ್ಣನೆ ಎಲ್ಲಿಂದ ಶುರು ಮಾಡಬಹುದು ಎಂಬ ಜಿಜ್ಞಾಸೆ ನಮಗೆ. ಏಕೆಂದರೆ ಎರಡು ಬಗೆಯ ಕೋಸಂಬರಿಯನ್ನೇ ನಾವು 'ಅದ್ಭುತ' ಎಂದು ಕರೆದರೆ ಭಕ್ಷ್ಯಗಳನ್ನು ವರ್ಣಿಸಲು ಪದಗಳೇ ಇರಲಾರವು. ಆದರೆ ಮಾಡಿದ ಎಲ್ಲ ಐಟಂಗಳು ಎರಡು ಕೋಸಂಬರಿ, ಎರಡು ಗೊಜ್ಜು, ಎರಡು ಪಲ್ಯ, ಕಲಸನ್ನ/ಚಿತ್ರಾನ್ನ, ಮಜ್ಜಿಗೆ ಹುಳಿ, ಆಂಬೊಡೆ, ಜಾಂಗೀರ್, ಸಾರು, ತೊವ್ವೆ ರುಚಿಯಲ್ಲಿ ಒಂದನ್ನೊಂದು ಮೀರಿಸುತ್ತಿದ್ದವು. ಹೊಟ್ಟೆ ತುಂಬುವಷ್ಟು ಮಾತ್ರ ತಿನ್ನಲು ಸಾಧ್ಯವಾಗುವಂತಹ ಮಿತಿಯನ್ನು ನಮ್ಮ ಮೇಲೆ ಭಗವಂತ ಹೇರಿರುವುದು ನೋಡಿದರೆ ಅವನು ಎಷ್ಟು ನಿರ್ದಯಿ ಎಂದು ಅನಿಸದೆ ಇರಲಾರದು.

ಬಸ್ರೂರು ಬಲರಾಮ ತಂಡವನ್ನು ಕರೆಸಿದ್ದರಿಂದ ಕಂಬಿಕಿತ್ತ ಕೃಷ್ಣಮೂರ್ತಿ ಅವರಿಗೆ 60 ವರ್ಷ ಆಗಿದ್ದಕ್ಕೂ ಸಾರ್ಥಕವಾಯಿತು. ಅಡುಗೆಯವರ ನೈಪುಣ್ಯತೆಯಿಂದ ಷಷ್ಟ್ಯಬ್ದಿಗೊಂದು ಅರ್ಥ ಬಂದಿತು. ಬಸ್ರೂರು ಬಲರಾಮ ಮತ್ತು ಸಂಗಡಿಗರು ಅಡಿಗೆ ಮಾಡುತ್ತಿದ್ದಾರೆ ಎಂದು ತಿಳಿದು ಬಂದರೆ ಅಲ್ಲಿಗೆ ಊಟಕ್ಕೆ ಹೋಗಲು ಆಹ್ವಾನಕ್ಕೆ ಕಾಯದಿರುವುದೇ ಲೇಸು.

✵



# ಶ್ರೀಪತಿಯ ಸಂಸಾರ

**- ಬೇಲೂರು ರಾಮಮೂರ್ತಿ**

**ಶ್ರೀ**ಪತಿಯ ಸ್ವಭಾವ ಹೇಗೆಂದರೆ **ತೆಪ್ಪಗಿದ್ದವ ಜಾಣ** ಅನ್ನೋ ಹಾಗೆ. ಅವನಿಗೆ **ಆಫೀಸೇ ಗುಡಿ, ದೊಡ್ಡ ಸಾಹೇಬರೇ ದೇವರು, ಶಾಯಿಯೇ ತೀರ್ಥ, ಪೆನ್ಸಿಲೇ ಪ್ರಸಾದ.** ಅವನಿಗೆ ದುಡ್ಡು ಅಂದ್ರೆ ಸ್ವಲ್ಪ ಅಲರ್ಜಿ. ದುಡ್ಡಿನಿಂದಲೇ **ಮನಸ್ತಾಪ ಮತ್ತು ಧನಸ್ತಾಪ** ಎರಡೂ ಬರೋದು ಅಂತ ಗೊತ್ತು. ಸರ್ಕಾರೀ ಕಛೇರಿಲಿ ಇದ್ದು ಲಂಚಕ್ಕೆ ಆಸೆ ಪಡದೇ ಸುಮ್ಮನೇ ದುಡಿಯುವವನನ್ನು **ಮೂಸಿ ಮೂದಲಿಸಿದವ ಮೂರ್ಖ** ಅಂತ ಕರೀತಾರೆ ಅಂತಲೂ ಗೊತ್ತು. ಲಂಚ ಕೊಡೋರು ಕೊಡ್ತಾರೆ ಆದರೆ ಇನ್ನು ಕೆಲವರು **ಹಸಿದ ಹೊಟ್ಟೆ ತೋರಿಸಿದರೆ ಮಸೆದ ಕತ್ತಿ ಎಸೆದರು** ಅಂತ ಮಾಡ್ತಾರೆ. ಎಷ್ಟೋ ಜನ ಅವನಿಗೆ ಗೊತ್ತಿರುವ ಹಾಗೆ ಕೇವಲ ದುಡ್ಡಿಗೆ ಆಸೆಪಟ್ಟು **ಉದರ ನಿಮಿತ್ತಂ ಬಹುಕೃತ ಮೋಸಂ** ಅನ್ನೋ ಸ್ವಭಾವ ಬೆಳೆಸಿಕೊಂಡಿರ್ತಾರೆ. ಆದರೆ ಶ್ರೀಪತಿ ಹಾಗಲ್ಲ. ನನ್ನ ಪಾಡಿಗೆ ನಾನಿರ್ತೀನಿ ಅಂತ ಅವನು ನಿರ್ಧರಿಸಿಯಾಗಿದೆ. ರಿಟೈರ್ ಆಗೋ ಮುಂಚೆ ಇರೋ ಒಬ್ಬ ಮಗನಿಗೆ ಮದುವೆ ಮಾಡಬೇಕು ಅಂತ ಹೆಣ್ಣುಗಳ ತಲಾಷಿಯಲ್ಲಿದ್ದಾನೆ. ಕೆಲವರು ಹೇಳ್ತಾರೆ ಮಗನಿಗೆ ಮದುವೆಯಾದರೆ **ಸೊಸೆಗೆ ಗೃಹ ಪ್ರವೇಶ ಅತ್ತೆಗೆ ಗ್ರಹ ಪ್ರವೇಶ** ಅಂತ. ಹಾಗಂತ ಮಗನಿಗೆ ಮದುವೆ ಮಾಡದೇ ಇರಲಾಗುವುದಿಲ್ಲ. ಎಲ್ಲ ಮುಗಿಸಿ ಒಂದು ದಿನ ರಿಟೈರ್ ಆಗಿ ಸರ್ಕಾರೀ ಕಛೇರಿಯಿಂದ ಮುಕ್ತಿ ಪಡೆದು **ವಾನಪ್ರಸ್ತ/ಶ್ವಾನಪ್ರಸ್ತ** (ಸಮಯ ಕಳೆಯಲು ಶ್ವಾನವನ್ನು ವಾಕಿಂಗ್ ಕರೆದುಕೊಂಡು ಹೋಗೋದು) ಇವುಗಳಿಗಾಗಿ ಕಾಯುತ್ತಿದ್ದಾನೆ.

***(ಈ ಚುಟುಕದ ವಿಶೇಷ ಏನು ಗೊತ್ತಾ)***


***ಗೊತ್ತಾಗ್ಬೇಕಾದ್ರೆ - ಕಡೇ ಪುಟ ನೋಡಿ***


✵

---

ತಿನ್ನಲು ಉಣ್ಣಲು ಆಗದಿದ್ದರೂ
ಕೂಡಿಡುವ ಆಸೆ
ನೆಟ್ಟಗೆ ನಿಲ್ಲಲು ಆಗದಿದ್ದರೂ
ಕುರ್ಚಿಯ ಆಸೆ
ಅದಕ್ಕೆ ಇಂಥವರಿಗೆ
ಏರುವವರೆಗೂ ಚಟ್ಟ
ರಾಜಕೀಯದ ಚಟ

*– ಸುಕೇಶವ*

ಹುರುಳಿ ಕಟ್ಟು...

# ಸಂಗೀತದ ಗುರುಗಳು...

**- ಎಚ್. ಗೋಪಾಲಕೃಷ್ಣ**

**ಸಂ**ಗೀತ ಹೇಳಿಕೊಡಲು ಗುರುಗಳು ದೂರದ ಊರಿನಿಂದ ಬರುತ್ತಿದ್ದರು. ಅವರ ಬಳಿ ಸಂಗೀತ ಕಲಿಯಲು ಸುಮಾರು ಶಿಷ್ಯರು ತರಗತಿಗಳಿಗೆ ಹಾಜರಿರುತ್ತಿದ್ದರು. ಶಿಷ್ಯರೊಬ್ಬರ ಮನೆಯಿಂದ ತಂಬೂರಿ ಬರುತ್ತಿತ್ತು. ತಂಬೂರಿ ಶೃತಿ ಸರಿಪಡಿಸಿಕೊಂಡು ಗುರುಗಳು ಸಂಗೀತಕ್ಕೆ ತೊಡಗಿದರೆ ಅವರನ್ನೇ ಮರೆತು ಬಿಡುತ್ತಿದ್ದರು. ಪ್ರತಿಯೊಬ್ಬರಿಗೂ ಸಂಗೀತದ ಅರಿವನ್ನು ಮೂಡಿಸಲು ಗುರುಗಳು ಪ್ರಯತ್ನಿಸುತ್ತಿದ್ದರು.

ಗುರುಗಳು ಸಂಗೀತ ಹೇಳಿಕೊಡುತ್ತಿದ್ದ ರೀತಿ, ಮಧ್ಯೆ ಮಧ್ಯೆ ಅವರು ಶಿಷ್ಯರಿಗೆ ವಿವರಿಸುತ್ತಿದ್ದ ರಾಗಗಳ ವೈವಿಧ್ಯತೆ ಅವರ ದನಿ, ದನಿಯಲ್ಲಿನ ಆರ್ದತೆ ಇವುಗಳು ಶಿಷ್ಯರಿಗೆ ಅಪ್ಯಾಮಾನವಾಗಿತ್ತು ಹಾಗೂ ಮೆಚ್ಚುಗೆಯನ್ನೂ ಪಡೆದಿತ್ತು. ಹದಿವಯಸ್ಸಿನ ಶಿಷ್ಯರು ಸಂಗೀತ ಕಲಿಯಲು ಬರುತ್ತಿದ್ದವು. ಸಹಜವಾಗಿಯೇ ಅಂತಹ ಶಿಷ್ಯರಲ್ಲಿ ಕೆಲವರಿಗೆ ಗುರುಗಳ ಮೇಲೆ ಪ್ರೀತಿ ಹುಟ್ಟಿತು. ಪ್ರೀತಿ ಹುಟ್ಟಿದ ಕೂಡಲೇ ಅದನ್ನು ಪ್ರಕಟಿಸುವ ಧೈರ್ಯ ಎಲ್ಲರಲ್ಲೂ ಇರುವುದಿಲ್ಲ. ಒಂದು ಶ್ರೀಮಂತ ಮನೆತನದ ಹುಡುಗಿ ಮಾತ್ರ ಆ ಧೈರ್ಯ ತೆಗೆದುಕೊಂಡಿತು. ಒಂದು ದಿವಸ ಸಂಗೀತದ ಪಾಠ ಮುಗಿದ ನಂತರ ಗುರುಗಳ ಬಳಿ ಬಂದಳು.

ಗುರುಗಳೇ ನಿಮ್ಮ ಹತ್ತಿರ ಕೊಂಚ ಮಾತನಾಡಬೇಕು ಅಂತ ಕೇಳಿದಳು.

ಗುರುಗಳು ಸಂಗೀತದ ಪಾಠದಲ್ಲಿ ಸಂಶಯ ಬಂದಿದೆಯೇನೋ ಅಂದುಕೊಂಡು ಕೇಳಮ್ಮಾ ಅದೇನು ಕೇಳಬೇಕೋ..... ಅಂದರು.

ಗುರುಗಳೇ ನನ್ನನ್ನು ಮದುವೆಯಾಗ್ತೀರಾ? ಅಂತ ಹುಡುಗಿ ನೇರವಾಗಿ ಕೇಳಿದಳು.

ಗುರುಗಳಿಗೆ ಹುಡುಗಿ ಧೈರ್ಯ ನೋಡಿ ಆಶ್ಚರ್ಯವಾಯಿತು.

ಮದುವೇನಾ? ಜರತಾರಿ ಶಲ್ಯವಿಲ್ಲ, ರೇಷ್ಮೆ ಅಂಗಿ ಇಲ್ಲ, ರೇಷ್ಮೆ ಪಂಚೆ ಇಲ್ಲ, ತಲೇಗೆ ಮುಂಡಾಸಿಲ್ಲ..... ಅದು ಹೇಗೆ ಮದುವೆಯಾಗಲಿ? ಅಂದರು.

ಹುಡುಗಿ ಸರಿ ಅಂತ ಹೋಯಿತು. ಜರತಾರಿ ಶಲ್ಯ, ರೇಷ್ಮೆ ಅಂಗಿ, ರೇಷ್ಮೆ ಪಂಚೆ, ಮುಂಡಾಸು.... ಕೊಂಡುಕೊಂಡು ಗುರುಗಳ ಬಳಿ ಬಂದಳು.

ಗುರುಗಳೇ ನೀವು ಹೇಳಿದ್ದ ಶಲ್ಯ, ರೇಷ್ಮೆ ಅಂಗಿ, ರೇಷ್ಮೆ ಪಂಚೆ, ಮುಂಡಾಸು ಇವನ್ನೆಲ್ಲಾ ತಂದಿದ್ದೀನಿ. ಈಗ ಮದುವೆಯಾಗುತ್ತೀರಾ? ಅಂದಳು.

ಗುರುಗಳು ಚಪ್ಪಲಿ ಇಲ್ಲ, ಛತ್ರಿ ಇಲ್ಲ ಅದು ಹೇಗೆ ಮದುವೆಯಾಗೋದು? ಅಂದರು.



ಹುಡುಗಿ ಮತ್ತೆ ಹೋದಳು. ಚಪ್ಪಲಿ, ಛತ್ರಿ ತಂದಿದ್ದೀನಿ ಈಗ ಮದುವೆಯಾಗುತ್ತೀರಾ? ಅಂದಳು.

ಗುರುಗಳು ಹುಡುಗಿಯನ್ನ ಮೆಚ್ಚುಗೆಯಿಂದ ನೋಡಿದರು. ಸಂಗೀತದ ಮೇಷ್ಟ್ರು ನಾನು ತಂಬೂರಿ ಇಲ್ಲದೇ ಮದುವೆ ಆಗುತ್ಯಾ? ಅಂದರು ಗುರುಗಳು.

ಹುಡುಗಿ ತಲೆ ಆಡಿಸಿಕೊಂಡು ಹೋದಳು. ಒಂದೆರೆಡು ವಾರದ ನಂತರ ಕೈಯಲ್ಲಿ ಗೌಸು ಹೊದಿಸಿದ ತಂಬೂರಿ ಹಿಡಿದು ಗುರುಗಳ ಬಳಿ ಬಂದಳು. ತಂಬೂರಿ ತಂದಿದ್ದೇನೆ – ಈಗ ಮದುವೆಯಾಗುತ್ತೀರಾ? ಅಂತ ಕೇಳಿದಳು.

ಗುರುಗಳು ಒಂದೆರೆಡು ತಿಂಗಳು ಸಮಯ ಕೊಡ್ತೀಯಾ? ಯೋಚನೆ ಮಾಡಿ ಹೇಳ್ತೀನಿ ಅಂದರು.

ಹುಡುಗಿ ತಲೆಯಾಡಿಸಿ ಹೋದಳು. ಸಂಗೀತದ ಪಾಠ ಮುಂದುವರೆದೇ ಇತ್ತು. ಗುರುಗಳು ಏನೂ ಆಗೇ ಇಲ್ಲ ಅನ್ನುವ ಹಾಗೆ ಪ್ರತಿದಿವಸ ಪಾಠ ಮಾಡುವರು. ಎಂದಿನ ಹಾಗೇ ಎಲ್ಲಾ ಶಿಷ್ಯರನ್ನೂ ಅದೇ ಪ್ರೀತಿಯಿಂದ ವಿಶ್ವಾಸದಿಂದ ನೋಡುವರು. ಹುಡುಗಿ ತನ್ನ ತಳಮಳವನ್ನು ಅಡಗಿಸಿಕೊಂಡಿದ್ದಳು, ಪಾಠಕ್ಕೆ ಬರುತ್ತಿದ್ದಳು, ಗುರಗಳು ಇವತ್ತೇನಾದರೂ ಹೇಳಬಹುದು ಅಂತ ಕಾಯುತ್ತಿದ್ದಳು. ಎರಡು ತಿಂಗಳಾದರೂ ಗುರುಗಳಿಂದ ಏನೂ ಪ್ರತಿಕ್ರಿಯೆ ಇಲ್ಲದ್ದರಿಂದ ಮತ್ತೆ ಗುರುಗಳ ಹತ್ತಿರ ಬಂದಳು. ಗುರುಗಳೇ ಒಂದೆರೆಡು ತಿಂಗಳು ಕಾಯಿ ಅಂತ ಹೇಳಿದ್ದಿರಿ, ಕಾದಿದ್ದೆ. ಈಗ ಹೇಳಿ ನನ್ನನ್ನ ಮದುವೆಯಾಗ್ತೀರಾ?

ಗುರುಗಳು ಶಿಷ್ಯೆಯನ್ನು ಎದುರಿಗೆ ಕೂಡಿಸಿಕೊಂಡರು.

ಅದು ಹೇಗೆ ಮದುವೆಯಾಗಲಿ ನಿನ್ನ? ನನಗಾಗಲೇ ಮದುವೆಯಾಗಿ ಎರಡು ಮಕ್ಕಳೂ ಇವೆಯಲ್ಲಾ ಅಂದರು.

ಹುಡುಗಿ ಮತ್ತೆ ಮಾತು ಮುಂದುವರಿಸದ ಹಾಗೆ ಹೇಳಿದರು – ನೋಡು ಮಗೂ ನಿನ್ನ ವಯಸ್ಸಿನಲ್ಲಿ ಎಲ್ಲವೂ ಚೆನ್ನ ಕಾಣಿಸುತ್ತೆ. ಬರೀ ಸಂಗೀತ ಒಂದೆ ಜೀವನ ಅಲ್ಲ. ನಾನೋ ಬರೀ ಸಂಗೀತ ಗೊತ್ತಿರೋನು ಮಾತ್ರಾ. ಬೇರೆ ಇನ್ನು ಯಾವ ವಿದ್ಯೆಯನ್ನೂ ಕಲಿತವನೇ ಅಲ್ಲ. ಇದರಿಂದಲೇ ಜೀವನ ಆಗಬೇಕು. ನೀನು ಇನ್ನೂ ಕಲೀತಿರೋ ಶಿಷ್ಯೆ. ಚೆನ್ನಾಗಿ ಕಲಿ, ಮನಸ್ಸು ಪಕ್ವವಾಗೋ ಹಾಗೆ ವಿದ್ಯೆ ರೂಢಿಸಿಕೋ.... ಆಮೇಲೆ ಒಂದು ಚೆಂದುಳ್ಳ ಹುಡುಗನ್ನ ನೋಡಿ ಮದುವೆಯಾಗಿ ಸುಖವಾಗಿರು.. ಕಲಿಯೋ ವಯಸ್ಸಿನಲ್ಲಿ ಕಲೀಬೇಕು, ಮದುವೆಯಾಗೋ ವಯಸ್ಸಿನಲ್ಲಿ ಮದುವೆಯಾಗಬೇಕು....

★★★

ಇದೊಂದು ಹೊರದೇಶದ ಜಾನಪದ ಕಥೆ. ಕಥೆಯ ಅಂಚಿನಲ್ಲಿ ಸಂಗೀತದ ಗುರುವಿನ ಮನಸ್ಸು ಹೇಗೆ ಕೆಲಸ ಮಾಡಿತು ಅಂತ ವಿವರಣೆ ಬರುತ್ತೆ. ಮುಗ್ಧ ಶಿಷ್ಯೆಗೆ ಮೋಸ ಮಾಡುವ ಇಚ್ಚೆ ಗುರುವಿಗೆ ಇರಲಿಲ್ಲ. ಅಕಸ್ಮಾತ್ ಶಿಷ್ಯೆ ಕೇಳಿದ ಕೂಡಲೇ ತಾನು ತನ್ನ ಪರಿಸ್ಥಿತಿ ವಿವರಿಸಿದ್ದರೆ

ಅದೇ ರೋಷದಲ್ಲಿ ಹುಡುಗಿ ತನಗೆ ಸಲ್ಲದ ಹುಡುಗನ ಕೈ ಹಿಡಿದುಬಿಡಬಹುದು, ಅದರಿಂದ ನಿಧಾನವಾಗಿ ಅವಳ ಮನಸ್ಸು ವಿಮುಖವಾಗುವ ಹಾಗೆ ಮಾಡಬೇಕು ಎಂದು ಯೋಚಿಸಿದರು. ಅದೂ ಅಲ್ಲದೇ ಶಿಷ್ಯೆಗೆ ಜಗತ್ತು ಏನು ಅನ್ನುವುದು ತಿಳಿದಿಲ್ಲ, ಹಸಿಗೂಸಿನ ಮನಸ್ಸಿನವಳು ಸುಲಭವಾಗಿ ಮೋಸಕ್ಕೆ ಒಳಗಾಗುವ ಮನೋಭಾವ ಇರುವವಳು – ಅವಳನ್ನು ದೂರ ನಿಂತೇ ಕಾಯಬೇಕು. ಯೋಜನೆ ಹಾಕಿದರು. ತನ್ನ ಬಗ್ಗೆ ಅವಳು ಪ್ರೀತಿ ತೋರಿಸಲಿ ಆದರೆ ಅದು ಬೇರೆ ಹಾದಿ ಹಿಡಿಯದ ಹಾಗೆ ತಾನು ಜವಾಬ್ದಾರಿ ಹೊರಬೇಕು ಅನಿಸಿತು. ಗುರು ಶಿಷ್ಯರ ಸಂಬಂಧ ಹೇಗಿರಬೇಕು ಎನ್ನುವುದನ್ನು ರೂಪಿಸಲು ಈ ಜಾನಪದ ಕಥೆಯನ್ನು ಉದಾಹರಣೆಯಾಗಿ ಹೇಳುತ್ತಾರೆ.

---

ಇವತ್ತು ಗಾಡಿಗೆ ಪೆಟ್ರೋಲ್ ಹಾಕಿಸಿಕೊಂಡೆ. ದುಡ್ಡು ಕೊಡುವಾಗ ಕಣ್ಣಿನಲ್ಲಿ ನೀರು ಬಂದಿತು. ಆದರೆ ಬೇರೆ ದ್ರವ್ಯಗಳ ಬೆಲೆ ಎಷ್ಟಿದೆ ಎಂದು ತಿಳಿದುಕೊಂಡ ಮೇಲೆ ಸ್ವಲ್ಪ ಸಮಾಧಾನವಾಯಿತು.

*ನನ್ನ ರಿಸರ್ಚ್‌ನ ಫಲಿತಾಂಶ ಹೀಗಿದೆ ನೋಡಿ:*

ಕೋಕಾಕೋಲ 330 ಮಿಲೀಗೆ ರೂ. 20 ಅಂದರೆ ಲೀಟರ್‌ಗೆ ರೂ. 61.

ಡೆಟ್ಟಾಲ್ 100 ಮಿಲೀಗೆ ರೂ. 20 ಅಂದರೆ ಲೀಟರ್‌ಗೆ ರೂ. 200.

ರೇಡಿಯೇಟರ್ ಕೂಲಂಟ್ 500 ಮಿಲೀಗೆ ರೂ. 160 ಅಂದರೆ ಲೀಟರ್‌ಗೆ ರೂ. 320.

ಪ್ಯಾಂಟೀನ್ ಕಂಡೀಷನರ್ 400 ಮಿಲೀಗೆ ರೂ. 165 ಅಂದರೆ ಲೀಟರ್‌ಗೆ ರೂ. 413

ಲಿಸ್ಟರೀನ್ 100 ಮಿಲೀಗೆ ರೂ. 45 ಅಂದರೆ ಲೀಟರ್‌ಗೆ ರೂ. 450

ಕೋರೆಕ್ಸ್ ಕಾಫ್ ಸಿರಪ್ 100 ಮಿಲೀಗೆ ರೂ. 57 ಅಂದರೆ ಲೀಟರ್‌ಗೆ ರೂ. 570

ಇವಿಯಾನ್ ಮಿಲರಲ್ ವಾಟರ್ 500 ಮಿಲೀಗೆ ರೂ. 330 ಅಂದರೆ ಲೀಟರ್‌ಗೆ ರೂ. 660

ಕೋರ್ಸ್ ವೈಟ್ ಎರೇಸರ್ 15 ಮಿಲೀಗೆ ರೂ. 15 ಅಂದರೆ ಲೀಟರ್‌ಗೆ ರೂ. 1000

ಒಂದು ಕಪ್ ಕಾಫಿಕ್ಷಿ (ಪಂಚತಾರಾ ಹೋಟೆಲಿನಲ್ಲಿ) 150 ಮಿಲೀಗೆ ರೂ. 175 ಅಂದರೆ ಲೀಟರ್‌ಗೆ ರೂ. 1167

ಓಲ್ಡ್‌ಸ್ಪೈಸ್ ಆಫ್ಟರ್ ಷೇವ್ ಲೋಷನ್ 100 ಮಿಲೀಗೆ ರೂ. 175 ಅಂದರೆ ಲೀಟರ್‌ಗೆ ರೂ. 1750

ಆಮಂಡ್ ಆಯಿಲ್ 25 ಮಿಲೀಗೆ ರೂ. 68 ಅಂದರೆ ಲೀಟರ್‌ಗೆ ರೂ. 2720

ಎಚ್‌ಪಿ ಡೆಸ್ಕ್ ಜೆಟ್ ಕಲರ್ ಇಂಕ್ ಕಾರ್ಟ್ರಿಡ್ಜ್ 21 ಮಿಲೀಗೆ ರೂ. 1990 ಅಂದರೆ ಲೀಟರ್‌ಗೆ ರೂ. 90476

ಈ ನನ್ನ ಸಂಶೋಧನೆಯಿಂದ ಪ್ರಭಾವಿತರಾಗಿದ್ದರೆ ನೀವು ಮುಂದಿನ ಸಲ ಪೆಟ್ರೋಲ್ ಬಂಕಿಗೆ ಹೋದಾಗ ದುಃಖ ಪಡುವುದಿಲ್ಲ.



# ವೈಎನ್ಕೆ ಅವರ ಕೊನೆ ಸಿಡಿಗಳು

**ಕಾ**ರ್ ಅಫಘಾತಕ್ಕೆ ಬಲಿ. ಸುತ್ತ ಜನ ಘೇರಾಯಿಸಿದ್ದರು. ಲೇಟ್ ಆಗಿ ಬಂದ ವ್ಯಕ್ತಿಗೆ ಜನರನ್ನು ತೂರಿ ಬಳಿಗೆ ಹೋಗಲಾಗಲಿಲ್ಲ. ಒಂದು ಐಡಿಯಾ ಹೊಳೆಯಿತು. 'ನಾನೇ ಆಕ್ಸಿಡೆಂಟ್ ಆದವನ ತಂದೆ. ದಯವಿಟ್ಟು ಜಾಗ ಬಿಡಿ' ಎಂದು ಕೂಗಿದ. ಜನ ದಾರಿ ಬಿಟ್ಟರು. ಬಳಿಗೆ ಹೋದ. ನೋಡಿದಾಗ ಶಾಕ್ ಆಯಿತು. ಕತ್ತೆ ಅಫಘಾತಕ್ಕೆ ಬಲಿ ಆಗಿತ್ತು.

★★★★

''ಕತ್ತೆಗಳ ಬಗ್ಗೆ ಜೋಕ್ ಏಕೆ ಜನಪ್ರಿಯ?''

'ಉತ್ತರ ಸಿಂಪಲ್. 'ಸತ್ತೆ' ಎಂದರೆ 'ನಿಕ್'ಗೆ ಸಮಾನ ಪದ ಆಗಿರುವಾಗ ಕತ್ತೆಗಳ ಕುರಿತ ಜೋಕ್‌ನಲ್ಲೇ ಕಿಕ್ ಹೆಚ್ಚಲ್ಲವಾ?'

★★★★

'ಪೇಪರ್‌ನವರು ಕತೆ ಕೇಳಿದರೆ ಸಾಕು. ಏನೂ ಯೋಚನೆ ಮಾಡದೆ ಕತೆ ಬರೆದು ಕೊಟ್ಟುಬಿಡ್ತೀನಿ'

ಅದೇ ನಿಮ್ಮ ಮೇಲಿರುವ ದೂರು – ಏನೂ ಯೋಚನೆ ಮಾಡಲ್ಲ ಅಂತ.

★★★★

ಬ್ಯಾಂಡೇಜ್ ಕಟ್ಟಿಕೊಂಡು ಕಚೇರಿಗೆ ಬಂದವನನ್ನು 'ಏನಾಯಿತು?' ಅಂತ ಅವನ ಮಿತ್ರ ಪ್ರಶ್ನಿಸಿದ.

ಈತ : ನನಗೂ ನನ್ನ ಹೆಂಡತಿಗೂ ಜಗಳ ಆಯಿತು. ಅವಳು ಚಚ್ಚಿಬಿಟ್ಟಳು.

ಆತ : ಚಚ್ಚಿದಳಾ? ನೀವೇನು ಗಂಡಸೋ, ಇಲಿಯೋ?

ಈತ : ನಾನು ಗಂಡಸು.

ಆತ : ಅದು ಹೇಗೆ ಹೇಳ್ತಿಯ?

ಈತ : ನನ್ನ ಹೆಂಡತಿ ಇಲಿ ಕಂಡ್ರೆ ಹೆದರ್ತಾಳೆ.

★★★★

ನಗರದ ಪತ್ರಕರ್ತರೊಬ್ಬರು ತಮ್ಮ ಕೆಲಸದ ಸುಭದ್ರತೆಯನ್ನು ಕೇರ್ ಮಾಡುತ್ತಲೇ ಇರಲಿಲ್ಲ.

'ಏಕೆ?' ಎಂದರೆ ಅವರ ಉತ್ತರ: ಮಾಲೀಕರು ನನ್ನನ್ನು ಡಿಸ್‌ಮಿಸ್ ಮಾಡುವಂತಿಲ್ಲ. ನಾನು ಆಗಲೇ ಸಾಕಷ್ಟು ಸಂಬಳ ಅಡ್ವಾನ್ಸ್ ತೊಗೊಂಡಿದ್ದೀನಿ. ಡಿಸ್‌ಮಿಸ್ ಮಾಡಿದರೆ ಲಾಸ್ ಯಾರಿಗೆ?''

★★★★

ಒಂದು ಕಾರ್ಖಾನೆಯಿಂದ ಹೊರಬರುತ್ತಾ ಒಬ್ಬ ವ್ಯಕ್ತಿ ನಿತ್ಯ ಎರಡು ಬಕೆಟ್ ಮಣ್ಣು ತರುತ್ತಿದ್ದ. 'ಇದೇನು, ನಿತ್ಯ ನೀನು ಮಣ್ಣು ಹೊತ್ತು ಒಯ್ಯುತ್ತೀಯಲ್ಲ?' ಎಂದು ಮಿತ್ರರು ಕೇಳಿದರು.

ಆತನ ಉತ್ತರ: ನಾನು ನಿತ್ಯ ಹೊರಕ್ಕೆ ಒಯ್ಯುವುದು ಮಣ್ಣಲ್ಲ. ಬೇರೆ ಬೇರೆ ಬಕೆಟ್'.

★★★★

ನಾನು ನನ್ನ ಗಂಡನ್ನ ಮದುವೆಯಾಗಿದ್ದು ಲವ್ ಅಟ್ ಸೆಕೆಂಡ್ ಸೈಟ್.

ಏನು ಹಾಗೆಂದರೆ?

ಮೊದಲು ನೋಡಿದಾಗ ಗೊತ್ತಿರಲಿಲ್ಲ. ಎರಡನೆ ಸಾರಿ ನೋಡಿದಾಗ ಗೊತ್ತಾಯಿತು, ಅವನು ಲಕ್ಷಾಧಿಕಾರಿ ಅಂತ. ಆಗಲೇ ಲವ್ ಮಾಡಿದ್ದು.

★★★★

ಏನು ನೀನೇ ಕುಕ್ ಮಾಡ್ಕೋತೀಯಾ?

ಏಕಾಂಗಿ : Not only I cook. I eat.

★★★★

'ಆತ ತುಂಬ ಸಾಕ್ರಿಫೈಸ್ ಮಾಡಿದ್ದಾನೆ.'

'ಹೌದು, ಆತ ತುಂಬ ಸ್ಯಾಕ್ರಿಫೈಸ್ ಮಾಡಿದ್ದಾನೆ. ತನ್ನ ಧ್ಯೇಯವನ್ನೇ ಸ್ಯಾಕ್ರಿಫೈಸ್ ಮಾಡಿದ್ದಾನೆ. ತನ್ನ ಗುರಿ ಸಾಧನೆಗೆ ಇತರರನ್ನೂ ಸ್ಯಾಕ್ರಿಫೈಸ್ ಮಾಡಿದ್ದಾನೆ.'

★★★★

ನನ್ನ ಮೊದಲ ಮಗಳು ಅಂಜನಾ. ಎರಡನೆಯವಳು ರಂಜನಾ. ಮೂರನೆಯವಳು ಅಮೃತಾಂಜನ.

**ವೈ ದಿಸ್ ಕೊಲೆವೆರಿ?**

ಮಿಲ್ಕು ವೈಟೂ, ಪೇಂಟು ವೈಟು ವೈಟು ವೈಟೂ ।
ಸುಣ್ಣ ವೈಟು, ಬಣ್ಣ ವೈಟು ವೈಟು ವೈಟೂ ।
ಪೈಸಾ ಪೈಸಾ ಡಾರ್ಕೂ ಡಾರ್ಕೂ । ಕೊಲೆವೆರಿ ಕೊಲೆವೆರಿ ಕೊಲೆವೆರಿ ಡೌ ॥
ಚೀಕು ವೈಟು, ಟೀತು ವೈಟು । ಸ್ಕಿನ್ನು ವೈಟೂ ಸ್ಮೈಲು ವೈಟೂ ।
ಹಾರ್ಟು ಡಾರ್ಕೂ ಡಾರ್ಕೂ ಡಾರ್ಕೂ । ಕೊಲೆವೆರಿ ಕೊಲೆವೆರಿ ಕೊಲೆವೆರಿ ಡೌ ॥
ಉಡ್ಗಿ ಕಣ್ಣು ಐಸು ಐಸೂ । ಐಸು ಕೆಳಗೆ ಕಪ್ಪಿನೊಳಗೆ ।
ವಾಟರ್ ಡ್ರಾಪೂ ಹಾಟೂ ಹಾಟೂ । ಓ ಗಾಡ್ ಬ್ಯಾಡಲವ್ವೂ,
ಬ್ಯಾಡ ಡವ್ವೂ ಡವ್ವೂ ಡವ್ವೂ । ಕೊಲೆವರಿ ಕೊಲೆವೆರಿ ಕೊಲೆವೆರಿ ಡೌ ॥
(ಯಾಕುಡೌ ಐಲ್ ಬಡ್ಜೈದ್ನೆ?)

– ಸಿ.ಎನ್. ಕೃಷ್ಣಮಾಚಾರ್



# ಜೀವನಾಂದ್ರೆ ಇದೇ

**– ಸಂಪಟೂರು ವಿಶ್ವನಾಥ**

**ಮ**ಧ್ಯರಾತ್ರಿಯಾಗೋಕ್ಕೆ ಕೆಲವು ನಿಮಿಷಕ್ಕೆ ಮುಂಚೆ ನನ್ನ ಹಾಸಿಗೆ ಪಕ್ಕದ ಟೆಲಿಫೋನ್ ಸದ್ದಾಯಿತು. ಯಾರಪ್ಪ ಇಷ್ಟು ಹೊತ್ನಲ್ಲಿ ಅಂದ್ಕೊಳ್ತಾ, ರಿಸೀವರನ್ನು ಕಿವಿಯ ಸಮೀಪಕ್ಕೆ ತಂದು, ''ಹಲೋ'' ಎಂದು ಆಕಳಿಸಿದೆ.

''ಅಲೋ, ಇದು ಎರಡು ಎರಡು, ಏಳು ಒಂದು, ಎರಡು ಆರಾ?'', ಅಂದಿತೊಂದು ಮುದಿಧ್ವನಿ.

''ಇದು ಇಪ್ಪತ್ತೆರಡು, ಎಪ್ಪತ್ತೊಂದು, ಎಪ್ಪತ್ತಾರು'', ಅಂದೆ ನಾನು.

''ಅಂಗಾದ್ರೆ ಕ್ಷಮ್ಸಿ, ನಾನು ರಿಂಗ್ ಮಾಡಿದ್ದು ಎರಡು ಎರಡು, ಏಳು ಒಂದು, ಎರಡು ಆರು ನಂಬರ್ಗೆ''.

''ಹೌದಾ? ಒಂದೊಂದು ಸಾರಿ ಹೀಗಾಗ್ಬಿಡತ್ತೆ. ಯಾವುದನ್ನೋ ಒತ್ತಿದರೆ, ಎಲ್ಲೋ ಹೋಗಿ, ಯಾವುದೋ ಸದ್ದಾಗತ್ತೆ''.

''ಮತ್ತೊಮ್ಮೆ ಕ್ಷಮ್ಸಿ, ನಾನು ಒತ್ತಿದ್ದು ಎರಡು ಎರಡು, ಏಳು ಒಂದು, ಎರಡು ಆರು''.

''ಪರ್ವಾಗಿಲ್ಲ ಇಡಿ, ನಾನು ಮಾತನಾಡ್ತಿರೋದು ಇಪ್ಪತ್ತೆರಡು, ಎಪ್ಪತ್ತೊಂದು, ಇಪ್ಪತ್ತಾರರಿಂದ. ಜೀವನಾಂದ್ರೆ ಇದೇ ... ಗುಡ್‌ನೈಟ್''.

ಮಾರನೆಯ ದಿನ ಬೆಳಿಗ್ಗೆ ಇದನ್ನ ಹೇಳಿದಾಗ ನನ್ಹೆಂಡ್ತಿ ನನ್ನನ್ನೇ ನೋಡಿ ಕಿಸಕ್ಕಂತ ನಕ್ಕಳು.

# ಫಲಕ

ಇಂದಿನ ವ್ಯಾಪಾರ, ವ್ಯವಹಾರ, ಸಂಸಾರ ಜಾಹೀರಾತಿನ ಮೇಲೆ ನಿಂತಿದೆ. ಬೆಂಗಳೂರಿನಂತಹ ಮಹಾನಗರದಲ್ಲಿ ಅಂಗಡಿಗಳು ಒಂದಕ್ಕೊಂದು ಅಂಟಿಕೊಂಡೇ ಇರುತ್ತವೆ.

ಇಂತಹ ಒಂದು ಅಂಗಡಿಯ ಮುಂದೆ ಈ ಫಲಕ ಇತ್ತು – ''ನಿಮಗೆ ಏನೇನು ಬೇಕೋ ಅವೆಲ್ಲಾ ನಮ್ಮ ಅಂಗಡಿಯಲ್ಲಿ ಸಿಕ್ಕುತ್ತದೆ''. ಇಲ್ಲಿ ವ್ಯಾಪಾರವೂ ಚೆನ್ನಾಗಿತ್ತು.

ಇದನ್ನು ಗಮನಿಸಿದ ಪಕ್ಕದಂಗಡಿಯ ಮಾಲಿಕ ಸ್ವಂತ ಬುದ್ಧಿಯಿಂದ ಇನ್ನೊಂದು ಫಲಕವನ್ನು ಸೃಷ್ಟಿಸಿದ. ಅದರಲ್ಲಿ ಹೀಗೆ ಬರೆದಿತ್ತು –

'ನಿಮಗೆ ಬೇಡವಾದ್ದು ನಮ್ಮ ಅಂಗಡಿಯಲ್ಲಿ ಇರುವುದಿಲ್ಲ''.

# ಮಾತಿನ ಮೋಡಿ

''ಅಮ್ಮಾ ಏನಾದರೂ ಭಿಕ್ಷೆ ಕೊಡಿ'', ಅನ್ನುವ ಕೂಗು ಎರಡನೆಯ ಬಾರಿ ಕಿವಿಗೆ ಅಪ್ಪಳಿಸಿದಾಗ, 'ಕಣ್ಣೀರು' ಧಾರಾವಾಹಿಯನ್ನು ಬಿಟ್ಟು, ಒಲ್ಲದ ಮನಸ್ಸಿನಿಂದ ಮುಂಬಾಗಿಲಿಗೆ ಬಂದಳು ಆದರ್ಶ ಗೃಹಿಣಿ.

ಭಿಕ್ಷುಕನನ್ನು ನೋಡಿ, ಕೇಳಿದಳು, ''ಕೈಕಾಲು, ಕಣ್ಣು ಗಟ್ಟಿಯಾಗಿದೆ. ನಿನಗೇನಾಗಿದೆ ಭಿಕ್ಷೆ ಬೇಡೋದಕ್ಕೆ. ಏನಾದರೂ ಕೆಲಸ ಮಾಡಿ ಊಟ ಸಂಪಾದಿಸಿಕೊಳ್ಳೊಕ್ಕಾಗೋಲ್ವಾ?!''

ಭಿಕ್ಷುಕ ಆಕೆಯನ್ನೇ ಕ್ಷಣಕಾಲ ದಿಟ್ಟಿಸಿ ನೋಡಿ, ಒಳಗಿನಿಂದ ಬರುತ್ತಿದ್ದ ಕಣ್ಣೀರ ಧ್ವನಿಯನ್ನು (ಅರ್ಥಾತ್ ಕಿರುಚಾಟವನ್ನು) ಕೇಳಿಸಿಕೊಂಡು ಹೇಳಿದ, ''ಸಿನಿಮಾ ಹೀರೋಯಿನ್ ಆಗುವ ಅರ್ಹತೆಯಿರುವವರು, ಮನೆಯಲ್ಲಿ ಕೂತುಕೊಂಡು ಒಬ್ಬರೇ ಧಾರಾವಾಹಿಯನ್ನು ಅನುಭವಿಸ್ತಿದ್ದೀರಿ. ಹೀಗಿರುವಾಗ ನಾನು ಯಾಕೆ ಭಿಕ್ಷೆ ಬೇಡಬಾರದು?''

ಆದರ್ಶ ಗೃಹಿಣಿಯ ಮುಖ ಅರಳಿತು. ಭಿಕ್ಷುಕನ ಪಾತ್ರೆ ತುಂಬಿತು.

## ಫೀಜು

ಒಂದೂರ್ನಲ್ಲಿ ಒಬ್ಬ ಜಿಪುಣ ಇದ್ದ. ವ್ಯವಸಾಯದಿಂದ ಬಂದ ಹಣ ಅವನ ಹತ್ತಿರ ಬೇಕಾದಷ್ಟಿತ್ತು.

ಒಮ್ಮೆ ಅವನ ಹೆಂಡತಿಗೆ ತುಂಬಾ ಕಾಯಿಲೆಯಾಯಿತು. ಜಿಪುಣ ರೈತ ವೈದ್ಯನನ್ನು ಕರೆಸಿದ. ಶ್ರೀಮಂತನ ಸ್ವಭಾವ ಗೊತ್ತಿದ್ದ ವೈದ್ಯ 'ತನ್ನ ಫೀಜನ್ನು ಮೊದಲೇ ಕೊಡಿ', ಅಂದ.

ಅದಕ್ಕೆ ಜಿಪುಣ ಹೇಳಿದ, ''ನನ್ನ ಹೆಂಡತಿಯ ಕಾಯಿಲೆಯನ್ನು ನೀನು ವಾಸಿ ಮಾಡಿದರೂ ಸರಿ, ಅವಳನ್ನು ಸಾಯಿಸಿದರೂ ಸರಿ, ನಿನಗೆ ಕೊಡಬೇಕಾದ ಫೀಜನ್ನು ಕೊಡುತ್ತೇನೆ''.

ವೈದ್ಯ ರೋಗಿಯನ್ನು ಪರೀಕ್ಷೆ ಮಾಡಿ, ಔಷಧಿ ಕೊಟ್ಟ. ಆದರೆ ಆಕೆ ಬದುಕಲಿಲ್ಲ.

''ನನ್ನ ಫೀಜು'', ಅಂದ ವೈದ್ಯ.

''ನಿನ್ನ ಔಷಧಿ ನನ್ನ ಹೆಂಡತಿಯ ಕಾಯಿಲೆಯನ್ನು ಗುಣಪಡಿಸಿತಾ?''

''ಇಲ್ಲ''

''ನೀನು ನನ್ನ ಹೆಂಡ್ತಿಯನ್ನು ಸಾಯಿಸಿದೆಯಾ?''

''ಇಲ್ಲ''

''ಹಾಗಾದರೆ ನಾನು ನಿನಗೆ ಫೀಜನ್ನು ಕೊಡಬೇಕಾಗಿಲ್ಲ''.

## ನನಗೇನು ಗೊತ್ತು?

ಅವನು ಕುದುರೆಯ ಮೇಲೆ ಕೂತುಕೊಂಡು ವೇಗವಾಗಿ ಹೋಗ್ತಿದ್ದ.


ಇದನ್ನು ನೋಡಿದ ಸೈಕಲ್ ಸವಾರ ಆಶ್ಚರ್ಯದಿಂದ ಕೇಳಿದ, ''ಎಲ್ಲಿಗಯ್ಯ ಹೋಗ್ತಿದ್ದೀಯ ಇಷ್ಟು ವೇಗವಾಗಿ''.

ಸವಾರ ಹೇಳಿದ, ''ನನಗೇನು ಗೊತ್ತು? ಕುದುರೆಯನ್ನೇ ಕೇಳು''.

ಈ ಮನನಯೋಗ್ಯ ಮಾತು, ನಮ್ಮ ಬದುಕಿಗೆ ಅನ್ವಯಿಸುತ್ತದೆ, ಅಲ್ಲವೇ?

❋




Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru

SIEMENS
Authorised Hearing Care Centre

Avail **FREE** supply of batteries for a year on purchase of hearing aids for this week.
10am - 1:30pm, 5pm - 8pm
Appointment : 26640571, 9741765454

**ಕಿವಿ – ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**
**ವಾಕ್ – ಶ್ರವಣದೋಷ ತಜ್ಞ, ವಿಸ್ಪರ್ ವಾಕ್ – ಶ್ರವಣ ಕೇಂದ್ರ**

# ನೀವು ಬದುಕಿದ್ದೀರಾ ಸಾರ್

**- ಡಾ|| ಡಿ.ವಿ. ಗುರುಪ್ರಸಾದ್**

**ಸು**ಮಾರು 30 ವರ್ಷಗಳ ಕಾಲ ಪೊಲೀಸ್ ಇಲಾಖೆಯಲ್ಲಿ ಹಿರಿಯ ಅಧಿಕಾರಿಯಾಗಿ ಸೇವೆ ಸಲ್ಲಿಸಿರುವ ನನ್ನನ್ನು ನನ್ನ ಸಹೋದ್ಯೋಗಿಗಳು ಹಲವಾರು ಬಾರಿ ಸಾಯಿಸಿಯೇ ಬಿಟ್ಟಿದ್ದಾರೆ. ಮೊದ ಮೊದಲಿಗೆ ನನ್ನ ಸಾವಿನ ಸುದ್ದಿ ಕೇಳಿ ನನಗೆ ಬಹಳ ಮುಜುಗರವಾಗುತ್ತಿತ್ತು. ಆದರೆ ಈಗ ಅಭ್ಯಾಸವಾಗಿಬಿಟ್ಟಿದೆ.

ಆಗತಾನೇ ನಾನು ಜಿಲ್ಲೆಯೊಂದರ ಎಸ್.ಪಿ. ಆಗಿದ್ದೆ. ನಮ್ಮ ಇಲಾಖೆಯಲ್ಲಿ ವೈರ್‌ಲೆಸ್ ಮೂಲಕದ ಸಂಪರ್ಕಕ್ಕೇ ಹೆಚ್ಚಿನ ಪ್ರಧಾನ್ಯತೆ. ಆಗಿನ ಕಾಲದಲ್ಲಿ ಇಂದಿನಂತೆ ಸೆಲ್‌ಫೋನ್‌ಗಳು, STD-ISDಗಳು ಇರಲೇ ಇಲ್ಲ. ಯಾವುದೇ ವಿಷಯ ಬೇಗನೇ ತಿಳಿಯಬೇಕಾದರೂ ವೈರ್‌ಲೆಸ್ ಅತೀ ಮುಖ್ಯ ಸಂಪರ್ಕ ಸಾಧನವಾಗಿತ್ತು. ಯಾವುದೇ ತೊಂದರೆ ಬಂದರೂ ಎಸ್.ಪಿ.ಯೇ ಕ್ರಮತೆಗೆದುಕೊಳ್ಳಬೇಕಾದ್ದರಿಂದ ಎಸ್.ಪಿ. ಎಲ್ಲಿದ್ದಾರೆ ಎನ್ನುವುದನ್ನು ''ವೈರ್‌ಲೆಸ್ ಕಂಟ್ರೋಲ್ ರೂಮ್''ಗೆ ತಿಳಿಸಬೇಕಾದ್ದು ಅತಿ ಮುಖ್ಯವಾಗಿತ್ತು. ಹೀಗಾಗಿ ಎಸ್.ಪಿ.ಯ ಚಲನವಲನಗಳ ಬಗ್ಗೆ ಜಿಲ್ಲಾ ಪೊಲೀಸರು ಸಾಕಷ್ಟು ನಿಗಾ ಇಟ್ಟೇ ಇಡಬೇಕಾಗಿತ್ತು. ಎಸ್.ಪಿ. ಉಪಯೋಗ ಮಾಡುವ ವಾಹನವಂತೂ ಎಲ್ಲರಿಗೂ ಪರಿಚಯವಾದ್ದರಿಂದ ಆ ವಾಹನವನ್ನು ಎಲ್ಲಿಕಂಡರೂ ಪೊಲೀಸರು ಕಂಟ್ರೋಲ್ ರೂಮ್‌ಗೆ ಸುದ್ದಿ ಮುಟ್ಟಿಸುತ್ತಿದ್ದರು. ಒಂದು ವೇಳೆ ಅವರು ಸುದ್ದಿ ತಿಳಿಸದಿದ್ದರೆ ಎಸ್.ಪಿ. ವಾಹನದ ಚಾಲಕನೇ ಕಂಟ್ರೋಲ್ ರೂಮ್‌ಗೆ ಎಸ್.ಪಿ. ಎಲ್ಲಿದ್ದಾರೆಂದು ಹೇಳಬೇಕಾಗಿತ್ತು. ಅಂದ ಹಾಗೆ ವೈರ್‌ಲೆಸ್, ರೇಡಿಯೋಥರವೇ ಆದ್ದರಿಂದ ವೈರ್‌ಲೆಸ್‌ನಲ್ಲಿ ನಡೆಯುವ ಸಂಭಾಷಣೆ ಇಡೀ ಜಿಲ್ಲೆಗೇ ತಿಳಿಯುತ್ತಿತ್ತು.

ಜಿಲ್ಲಾ ಎಸ್.ಪಿ.ಯಾದ ಮೊದಲವಾರ ನಾನು ಜಿಲ್ಲಾ ಕೇಂದ್ರದಿಂದ ತೀರಾ ದೂರದಲ್ಲಿದ್ದ ನಾರಾಯಣಪುರಕ್ಕೆ ಹೋಗಿದ್ದೆ. ಅಲ್ಲಿಂದ ವಾಪಸ್ಸಾಗುತ್ತಿದ್ದು, ಸುರಪುರ ಪಟ್ಟಣವನ್ನು ನಾನು ದಾಟಿದಾಗ ನನ್ನ ವಾಹನದ ವೈರ್‌ಲೆಸ್ ಮೂಲಕ ಕೇಳಿಬಂದ ವಾಣಿ "MIKE-1 PASSED AWAY SURAPURA" ಎಂದು. ಒಂದು ನಿಮಿಷ ನಾನು ಹೌಹಾರಿದೆ. ''ಏನಪ್ಪಾ ನನ್ನನ್ನು ಸಾಯಿಸೇಬಿಟ್ಟಿರಲ್ಲಾ'' ಎಂದು. ಆದರೂ ಪ್ರತಿಕ್ರಿಯೆ ನೀಡಲಿಲ್ಲ, ಸ್ವಲ್ಪ ನಿದ್ರೆ ಹತ್ತಿತ್ತು. ಎಚ್ಚರವಾದಾಗ ಜೇವರ್ಗಿ ಪಟ್ಟಣ ಬಂದಿತ್ತು. ಕೆಲ ಕಾಲದನಂತರ ವೈರ್‌ಲೆಸ್ ಮೂಲಕ ''ಎಸ್. ಸಾಹೇಬ್ ಪಾಸ್ಡ್ ಅವೇ'' ಎಂಬ ವಾಣಿ ಕೇಳಿಸಿತು. ''ನಿಜಕ್ಕೂ ಗಾಭರಿಯಾಗಿ ನನ್ನ ಕೈ ನಾನೇ ಚಿವುಟಿ ನೋಡಿಕೊಂಡೆ'' ಅಲೆಲೇ ಬದುಕಿಯೇ ಇದ್ದೇನಲ್ಲಾ, ಏಕೆ ಪಾಸ್ಡ್ ಅವೇ ಅಂತಾ ಹೇಳ್ತಾ ಇದ್ದಾರೆ ಎಂದು ಕೋಪಗೊಂಡು ನಾನೇ ವೈರ್‌ಲೆಸ್ ಸೆಟ್‌ಅಮುಕಿ ಕಂಟ್ರೋಲ್, ನಾನು ಎಸ್.ಪಿ. ಮಾತನಾಡೋದು, ''ನಾನು ಪಾಸ್ಡ್ ಅವೇ ಆಗಿಲ್ಲ, ಬದುಕಿಯೇ ಇದ್ದೇನೆ'' ಎಂದೆ.

ಕಂಟ್ರೋಲ್ ರೂಮ್ ಆಪರೇಟರ್ ''ಹಾಗಾದ್ರೆ ಈಗ ಎಲ್ಲಿದ್ದೀರಾ ಸಾರ್ ನೀವು'' ಎಂದ.



''ಭೂಮಿ ಮೇಲೆಯೇ ಇದ್ದೇನೆ ಆಕಾಶದಲ್ಲಲ್ಲ'' ಎಂದು ಸಿಡುಕಿದೆ.

''ಸಾರಿ ಸಾರ್, ನೀವು ಈಗತಾನೇ ಜೇವರ್ಗಿ ದಾಟಿದೀರಿ ಅಂತಾ ಹೇಳ್ತಾ ಇದ್ದಾರಲ್ಲಾ'' ಎಂದ.

''ಹೌದು'' ಎಂದೆ.

''ಹಾಗಾದರೆ ನೀವು ಜೇವರ್ಗಿ ಪಾಸ್ಡ್ ಅವೇ ಎನ್ನುವುದು ಸರಿ ಅಲ್ವಾ'' ಎಂದ.

ತಕ್ಷಣ ನನಗೆ ಜ್ಞಾನೋದಯವಾಯಿತು.

ಪಾಸ್ಡ್ ಅವೇ ಎಂದರೆ ಪೊಲೀಸ್ ವೈರ್‌ಲೆಸ್ ಭಾಷೆಯಲ್ಲಿ ''ಪಾಸ್ ಆಗಿದ್ದಾರೆ ಅಥವಾ ಹಾದು ಹೋದರು'' ಎಂದು ಅರ್ಥಮಾಡಿಕೊಂಡೆ.

ಆಮೇಲೆ ನಾನು ತಲೆ ಕೆಡಿಸಿಕೊಳ್ಳುವುದೇ ಬಿಟ್ಟೆ. ನನ್ನ ಸುದೀರ್ಘ ಸೇವೆಯಲ್ಲಿ ಎಷ್ಟು ಸಾವಿರ ಬಾರಿ ನಾನು ಪಾಸ್ಡ್ ಅವೇ ಆಗಿದ್ದೇನೋ ನನಗೇ ಲೆಕ್ಕ ಗೊತ್ತಿಲ್ಲ.

ಒಂದು ವರ್ಷದ ಹಿಂದೆ ನಾನು ಸೇವೆಯಿಂದ ನಿವೃತ್ತಿ ಹೊಂದಿದೆ. ಹೀಗಾಗಿ ನನಗೂ ವೈರ್‌ಲೆಸ್‌ಗೂ, ನನಗೂ ಪೊಲೀಸ್ ಕಂಟ್ರೋಲ್ ರೂಮ್‌ಗೂ ಸಂಪರ್ಕ ಕಡಿದುಹೋಗುತ್ತದೆ ಎಂದುಕೊಂಡೆ. ಸ್ವಲ್ಪ ಮಟ್ಟಿಗೆ ನನ್ನ ಅನಿಸಿಕೆ ಸರಿ ಆದರೂ ಬೆಂಗಳೂರಿನ ಪೊಲೀಸ್ ಕಂಟ್ರೋಲ್ ರೂಮ್‌ನವರು ಅದು ಹೇಗೋ ನನ್ನ ಮೊಬೈಲ್ ನಂಬರ್ ಪಡೆದುಕೊಂಡಿದ್ದರು. ಕೆಲವೊಂದು ಮುಖ್ಯ ವಿಷಯಗಳನ್ನು ನನಗೆ ಆಗ್ಗಿಂದಾಗ್ಗೆ ತಿಳಿಸುತ್ತಿದ್ದರು.

ಈಗ ಎರಡು ತಿಂಗಳ ಹಿಂದಿನ ಮಾತು. ಸೇವೆಯಲ್ಲಿ ನನಗಿಂತಾ ಹಿರಿಯರಾಗಿದ್ದು, ಆದರೂ ನನ್ನದೇ ವಯಸ್ಸಿನ ಇಬ್ಬರು ನಿವೃತ್ತ ಡಿ.ಸಿ.ಎಸ್. ಅಧಿಕಾರಿಗಳು ಒಬ್ಬರ ನಂತರ ಒಬ್ಬರು ಭಗವಂತನ ಪಾದ ಸೇರಿಬಿಟ್ಟರು. ಇದರಿಂದ ಮನಸ್ಸಿಗೆ ತುಂಬಾ ಬೇಸರವಾಗಿತ್ತು. ಬೇಜಾರು ಕಳೆಯಲು ಒಂದು ಹಾಸ್ಯ ನಾಟಕ ನೋಡಲು ಹೋದೆ. ನಾಟಕ ಕುತೂಹಲದ ಹಂತದಲ್ಲಿದ್ದಾಗ ನನ್ನ ಮೊಬೈಲ್ ಫೋನ್ ವೈಬ್ರೇಟ್ ಮಾಡಿತು. ಯಾರು ಎಂದು ನೋಡಿದೆ. ಪೊಲೀಸ್ ಕಂಟ್ರೋಲ್ ರೂಮ್ ಕಾಲಿಂಗ್ ಎಂದು ಬರ್‍ತಾಇತ್ತು. ಏನೋ ಗಹನ ವಿಚಾರ ಇರಬಹುದು ಅಂತ ಒಲ್ಲದ ಮನಸ್ಸಿನಿಂದಲೇ ನಾಟಕ ಬಿಟ್ಟು ಹೊರಗೆ ಬಂದೆ.

''ಗುರುಪ್ರಸಾದ್ ಸಾಹೇಬ್ರಾ ಸಾರ್'' ಎಂದು ದೂರವಾಣಿ ಮಾಡಿದವ ಕೇಳಿದ.

''ಹೌದು, ಏನು ಬೇಕು'' ಎಂದುಗಡುಸಾಗಿಯೇ ಕೇಳಿದೆ.

''ಸಾರ್ ನಾನು ಪೊಲೀಸ್ ಕಂಟ್ರೋಲ್ ರೂಮ್ ಆಪರೇಟರ್'' ಎಂದ.

ಕಾಲರ್ ಐಡಿ ನನ್ನ ಫೋನ್‌ನಲ್ಲಿ ಬರ್‍ತಾಇದೆ. ಏನು ವಿಷಯ ಬೇಗ ಹೇಳು ಎಂದೆ. ''ನೀವು ಹುಷಾರಾಗಿದ್ದೀರಾ ಸಾರ್'' ಎಂದ.

''ನನಗೇನಾಗಿದೆದಾಡಿ'' ಎಂದೆ.

ಆತ ಸಂಕೋಚದ ಧ್ವನಿಯಿಂದ ಕೇಳಿದ ''ಸಾರ್ ತಪ್ಪು ತಿಳ್ಕೋಬೇಡಿ. ಯಾರೋ ಪ್ರೆಸ್ ರಿಪೋರ್ಟರ್‌ಗಳು ನಮ್ಮ ಕಂಟ್ರೋಲ್ ರೂಮ್‌ಗೆ ಫೋನ್‌ಮಾಡಿದ್ರು. ನೀವು ಹುಷಾರಾಗಿದ್ದೀರಾ ಹೇಗೆ ತಿಳ್ಕೊಳಿ ಅಂತ ಹೇಳಿದ್ರು, ಅದಕ್ಕೆ ಕಾಲ್ ಮಾಡಿದೆ.''

‘‘ಓಹೋ ನಾನು ಹೋಗಿಬಿಟ್ಟೆಅಂತಾ ಹೇಳಿದ್ರಾ’’ ಎಂದೆ.

ಆತ ಮಾತನಾಡಲಿಲ್ಲ.

‘‘ಏನೂ ವರಿ ಮಾಡ್ಕೋಬೇಡಾ, ನಾನು ಚೆನ್ನಾಗಿಯೇ ಇದ್ದೀನಿ’’ ಎಂದೆ.

‘‘ಸಾರ್ ಆ ರಿಪೋರ್ಟರ್ಸ್ ಮತ್ತೆ ನಮಗೆ ಕಾಲ್ ಮಾಡಿದ್ರೆ ನಿಮಗೇ ಡೈರೆಕ್ಟ್ ಮಾತಾಡಂತ ನಿಮ್ಮ ನಂಬರ್ ಕೊಡ್ತಾ’’ ಎಂದ.

ಖಂಡಿತಾ ಕೊಡು ಎಂದು, ಮತ್ತೆ ನನ್ನ ಸೀಟಿಗೆ ವಾಪಸ್ಸಾಗಿ ನಾಟಕ ಎಂಜಾಯ್ ಮಾಡಿದೆ.

ನಾನು ಮನೆಗೆ ಬಂದ ನಂತರ ನನ್ನ ಮೊಬೈಲ್ ರಿಂಗಾಯಿತು.

‘‘ರಿಟೈರ್ಡ್ ಡಿ.ಜಿ.ಪಿ. ಸಾಹೇಬ್ರಾ ಸಾರ್’’ ಎಂದ ಕಾಲ್ ಮಾಡಿದ ವ್ಯಕ್ತಿ.

‘‘ಹೌದು’’ ಎಂದೆ.

‘‘ಸಾರ್ ನಾನು ಬೆಳ್ಳಿ ನ್ಯೂಸ್ ಛಾನಲ್ ರಿಪೋರ್ಟರ್. ನೀವು ICUನಲ್ಲಿ ಇದ್ದೀರಾ’’ ಎಂದ.

‘‘ಇಲ್ಲಪ್ಪ ಬೆಳಿಗ್ಗೆ ಹೋಗಿದ್ದೆ, ಈಗ ಮನೇಲಿದ್ದೀನಿ’’ ಎಂದೆ.

‘‘ICUಗೆ ಯಾಕೆ ಹೋದ್ರಿ ಸಾರ್, ಆರೋಗ್ಯ ಸರೀ ಇಲ್ವಾ’’ ಎಂದ.

‘‘ಆರೋಗ್ಯ ಸರಿಯಾಗಿಯೇ ಇದೆಯಪ್ಪ. ಈಗ ನಾನು ಆಸ್ಪತ್ರೆ ನಡೆಸುವ ಸಂಸ್ಥೆಯೊಂದರ ಮುಖ್ಯಸ್ಥನಾಗಿದ್ದೇನೆ. ಯಾರೋ ಬೇಕಾದವರು ICUಗೆ ಸೇರಿದ್ದರು. ಅವರನ್ನ ನೋಡೊಕೆ ಹೋಗಿದ್ದೆ’’ ಎಂದೆ.

‘‘ನೀವು ಬದುಕಿದ್ದೀರಾ ಸಾರ್’’ ಎಂದ.

‘‘ನೀನು ಇಷ್ಟು ಹೊತ್ತು ನನ್ನ ಭೂತದ ಜತೆ ಮಾತಾಡ್ತಾ ಇದ್ದೆಯೇನಪ್ಪಾ’’ ಎಂದು ಕೇಳಿದೆ.

‘‘ಇಲ್ಲ ಸಾರ್, 1975 ಬ್ಯಾಚ್‌ನ ಐ.ಪಿ.ಎಸ್. ಅಧಿಕಾರಿ ಒಬ್ಬರು ತೀರಿಕೊಂಡರು ಅಂತ ಸುದ್ದಿ ಬಂತು. ನೀವೂ ಅದೇ ಬ್ಯಾಚ್ ಅಲ್ವಾ ಸಾರ್, ನೀವೇ ಹೋಗಿಬಿಟ್ಟಿರಬೇಕು ಅಂತ ಕಂಟ್ರೋಲ್ ರೂಮ್‌ಗೆ ಫೋನ್ ಮಾಡಿ ವಿಷಯ ಕೇಳಿದೆ’’ ಅಂದ.

‘‘ನೋಡಪ್ಪಾ ನಿನ್ನ ಇನ್‌ಫರ್‌ಮೇಷನ್ ತಪ್ಪು. ನಾನು 1976 ಬ್ಯಾಚ್ ಅಧಿಕಾರಿ. 1975 ಬ್ಯಾಚ್ ಅಧಿಕಾರಿ ತೀರಿಕೊಂಡು 10 ದಿನ ಆಯ್ತು’’ ಅಂತ ಹೇಳಿದೆ.

‘‘ವೆರಿ ವೆರಿ ಸಾರಿ ಸಾರ್’’ ಅಂತ ಥಟಕ್ಕನೇ ಫೋನ್ ಇಟ್ಟ.

ನಡೆದ ಘಟನೆ ಮನೇಲಿ ಹೇಳಿ ‘‘ಇನ್ನೂ ಎಷ್ಟು ಸಲ ಸಾಯಿಸ್ತಾರೋ ನನಗಂತೂ ಗೊತ್ತಿಲ್ಲ’’ ಎಂದು ಗೊಣಗಿದೆ. ರೀ, ನಿಮಗಂತೂ ಸತ್ತೂ ಸತ್ತೂ ಅಭ್ಯಾಸವೇ ಆಗಿಬಿಟ್ಟಿದೆ. ಯಾಕೆ ವರಿ ಮಾಡ್ಕೋತೀರಾ. ನಿಮಗೆ ಆಯಸ್ಸು ಇನ್ನೂ ಜಾಸ್ತಿ ಆಗುತ್ತೆ, ಬನ್ನಿ ಊಟ ಮಾಡಿ ಅಂದಳು ನನ್ನ ಹೆಂಡತಿ.



# ಜನ-ಸಮ್ಮಾನ..

- ಪ್ರಭಾ

**ಎ**ಮ್ಮ ಮನೆಯಂಗಳದಿ ಬೆಳೆದೊಂದು ಹೂವನು ನಿಮ್ಮ ಮಡಿಲೊಳಗಿಡಲು ತಂದಿರುವೆವೂ ಬನ್ನಿ ಕೊಳ್ಳಿರೀ ಮಗುವನ್ನು ಎಮ್ಮ ಮನೆಯ ಬೆಳಕನ್ನು..

ಹಳೆ ಮೈಸೂರಿನಲ್ಲಿ ನಡೆಯುವ ಯಾವುದೇ ಮದುವೆ ಮನೆಗೆ ಹೋಗಿ. ಅಲ್ಲಿ ಮನೆ ತುಂಬಿಸುವ ಹಾಡು ಇದು. ಹಾಡು ಕೇಳುತ್ತಾ ಕೇಳುತ್ತಾ ಅವರ ಅರಿವಿಗೆ ಬರದ ಹಾಗೆ ಕಣ್ಣೀರು ಹರಿಸುವ ಅದೆಷ್ಟು ತಂದೆ ತಾಯಂದಿರೋ, ಬಂಧು ಬಳಗದವರೋ.... ಲೆಕ್ಕಕ್ಕೆ ಸಿಗದು. ಜೀವಿತ ಕಾಲದಲ್ಲಿಯೇ ಕವಿತೆಯನ್ನು ರಚಿಸಿದ ಕವಿ ಜನರ ಬಾಯಲ್ಲಿ ಹರಿದಾಡಿ ಅವರ ಭಾವನೆಗಳನ್ನು ತಟ್ಟಿ ಎಬ್ಬಿಸುವ ಕ್ರಿಯೆ ಕೆಲವೇ ಕೆಲವು ಭಾಷೆಗಳಲ್ಲಿ ನಡೆದಿದೆ. ತಮಾಷೆ ಎಂದರೆ ಕವಿತೆ ಹಾಡುವ ಜನರಿಗೆ ಅದನ್ನು ಬರೆದವರೇ ತಿಳಿದಿಲ್ಲದಿರುವುದು. ಇಂತಹ ಕೆಲವೇ ಭಾಷೆಗಳಲ್ಲಿ ನಮ್ಮದೂ ಒಂದು ಮತ್ತು ಮೇಲಿನ ಕವಿತೆ ರಚಿಸಿದವರು ಶ್ರೀ ಪಿ. ಸೀತಾರಾಮಯ್ಯನವರು. ಈ ಗೀತೆಯ ಹಾಗೆಯೇ ಬೇಂದ್ರೆಯವರ ಕೆಲವು ಕವನಗಳೂ ಸಹ ಜನರ ಬಾಯಲ್ಲಿ ಹರಿದಾಡಿದೆ. ಒಬ್ಬ ಕವಿಗೆ ಇಂತಹ ಸಂತೋಷ ಅವರ ಜೀವಿತ ಅವಧಿ ಯಲ್ಲಿಯೇ ಸಿಗುವುದು ಬಹಳ ಅಪರೂಪ.

## ಕವಿ ಮತ್ತು ಶ್ರೀ ಸಾಮಾನ್ಯ

ಕನ್ನಡದ ಜನಪ್ರಿಯ ಕವಿ ಯಾರು ಅಂದರೆ ಒಟ್ಟಿಗೇ ಹಲವಾರು ಕವಿಗಳ ಹೆಸರು ಮನಸ್ಸಿಗೆ ನುಗ್ಗಿ ಬರುತ್ತದೆ. ಜನಸಾಮಾನ್ಯರಲ್ಲಿ ಒಂದಾಗಿ ಅಡ್ಡಾಡಿದ ಕವಿಗಳ ಸರತಿ ಬಂದರೆ ಈ ಸಂಖ್ಯೆ ಸೀಮಿತವಾಗುತ್ತದೆ. ತನ್ನ ಪಾಂಡಿತ್ಯ, ದೊಡ್ಡಸ್ತಿಕೆ ಮತ್ತು ಬೌದ್ಧಿಕ ಮಟ್ಟ ಇವೆಲ್ಲವನ್ನೂ ತಲೆಗೆ ಹಚ್ಚಿಕೊಳ್ಳದೇ ಜನ ಸಾಮಾನ್ಯರೊಂದಿಗೆ ಒಂದಾಗಿ ಸಂತೋಷಿಸುತ್ತಿದ್ದ ಕವಿಗಳೆಂದರೆ ಧಾರವಾಡದ ಬೇಂದ್ರೆ ಅಜ್ಜ. ವರಕವಿ ಬೇಂದ್ರೆಯವರಿಗೆ ಜ್ಞಾನಪೀಠ ಪ್ರಶಸ್ತಿ ಬಂದ ಮಾರನೇ ದಿವಸ ಅವರನ್ನು ನೋಡಲು ಕೆಲವು ಸಾಹಿತಿಗಳು ಹೋದರು. ಅವರ ಮನೆಯ ದಾರಿಯಲ್ಲಿ ಚಪ್ಪಲಿ ರಿಪೇರಿ ಮಾಡುತ್ತಾ ಕುಳಿತಿದ್ದ ಒಬ್ಬ ಮೋಚಿ. ಮೋಚಿಯೆದುರು ಕುಕ್ಕರಗಾಲಿನಲ್ಲಿ ಕೂತು ಆತನ ಕ್ಷೇಮ ಸಮಾಚಾರ ವಿಚಾರಿಸುತ್ತಿದ್ದ ವೃದ್ಧರೊಬ್ಬರು. ಎಂದಿನ ಹಾಗೆ ಕರಿ ಬಣ್ಣದ ಟೋಪಿ, ಕಚ್ಚೆ ಪಂಚೆ, ಷರಟು ಧರಿಸಿದ್ದ ವೃದ್ಧರು ಮೋಚಿಯೆದುರು ಕೂತು ಚಪ್ಪಲಿ ಹೇಗೆ ರಿಪೇರಿ ಮಾಡುತ್ತಾನೆ ಎಂಬುವುದನ್ನು ಅವಲೋಕಿಸುತ್ತಿದ್ದರು.

ಹತ್ತಿರ ಸರಿದ ಹಾಗೆ ವೃದ್ಧರು ಬೇಂದ್ರೆಯವರು ಎಂದು ಗೊತ್ತಾಯಿತು! ಕವಿಗಳು ಜನರ ಬಾಯಲ್ಲಿ ಹೇಗೆ ನಲಿದಾಡುತ್ತಾರೆ ಎಂದರೆ ಜನ ಅವರನ್ನು ತಮ್ಮವರಲ್ಲಿ ಒಬ್ಬ ಎಂದು ತಿಳಿಯುತ್ತಾರೆ ಆತ ಬರೆದದ್ದು ಮೆಚ್ಚುತ್ತಾರೆ, ಸಮಯ ಸಿಕ್ಕಾಗಲೆಲ್ಲಾ ಆ ಹಾಡುಗಳನ್ನು ಗುಣಗುಣಿಸುತ್ತಾರೆ.

# ಕವಿಯ ಮೇಲೆ ಹಾರುವ ಬಯಕೆ

ಪಾಬ್ಲೋ ನೆರುಡ – ದಕ್ಷಿಣ ಅಮೇರಿಕಾದ ಚಿಲಿ ದೇಶದ ಕ್ರಾಂತಿಕಾರಿ ಕವಿ. ಆತನ ಆತ್ಮ ಕಥೆ – ಮೆಮ್ವಾ. ಅವನ ಆತ್ಮ ಕಥೆಯ ಉದ್ದಕ್ಕೂ ಆತನ ಯೋಚನಾಲಹರಿ ಹಾಗೂ ಆತ ಭೇಟಿ ಮಾಡಿದ ವಿಲಕ್ಷಣ ವ್ಯಕ್ತಿಗಳ ನೆನಪು ಹರಿದಿದೆ.

ಈತನ ಗೆಳೆಯ ಮತ್ತೊಬ್ಬ ಕವಿ ಆಲ್ಬರ್ಟೊ ರೋಜಸ್ ಗಿಮನೆಜ್ ಬಳಿ ವ್ಯಕ್ತಿಯೊಬ್ಬ ಬಂದ. ಸ್ವಾಮಿ ನನ್ನದೊಂದು ಕೋರಿಕೆ ತಾವು ನೆರವೇರಿಸಬೇಕು ಅಂದ.

ಏನದು? – ಕವಿ ಕೇಳಿದ.

ನಾನು ನಿಮ್ಮ ಮೇಲೆ ಹಾರಬೇಕು – ಅಂದ ಅಪರಿಚಿತ.

ಕುರ್ಚಿಯ ಮೇಲೆ ಕುಳಿತಿರುವ ನನ್ನ ಮೇಲೆ ಹಾರುವಷ್ಟು ಶಕ್ತಿ ನಿನಗಿದೆಯೇ?

ಇಲ್ಲ ಸ್ವಾಮಿ, ನೀವು ಸತ್ತು ಶವ ಪೆಟ್ಟಿಗೆಯಲ್ಲಿ ಇರುತ್ತೀರಲ್ಲಾ ಆಗ ನಿಮ್ಮ ಮೇಲೆ ಹಾರುವ ಯೋಚನೆ ನನ್ನದು – ವಿಶಿಷ್ಟ ವ್ಯಕ್ತಿಗಳಿಗೆ ನಾನು ಗೌರವ ಸೂಚಿಸುವುದು ಹೀಗೆ – ತನ್ನ ಬಳಿ ಇದ್ದ ಪುಸ್ತಕ ತೆರೆದು ತಾನು ಹಾರಿದವರ ಪಟ್ಟಿ ತೋರಿಸಿದ. ಗಿಮನೆಜ್‌ಗೆ ಖುಷಿಯಾಯಿತು ಮತ್ತು ತನ್ನ ಒಪ್ಪಿಗೆಯನ್ನೂ ನೀಡಿದ. ಅದೆಷ್ಟೋ ವರ್ಷಗಳ ನಂತರ ಹೆಚ್ಚು ಮಳೆ ಸುರಿದ ಒಂದು ಛಳಿಗಾಲದಲ್ಲಿ ಈತ ನ್ಯೂಮೋನಿಯಾದಿಂದ ಸತ್ತ. ಈತನ ಶವವನ್ನು ಶವ ಪೆಟ್ಟಿಗೆಯಲ್ಲಿಟ್ಟು ಗೆಳೆಯರು ಸುತ್ತಾ ನೆರೆದಿದ್ದರು. ಕರಿ ಉಡುಗೆ ತೊಟ್ಟಿದ್ದ ಮಳೆಯಲ್ಲಿ ನೆಂದು ತೊಪ್ಪೆಯಾಗಿದ್ದ ವ್ಯಕ್ತಿಯೊಂದು ಪೆಟ್ಟಿಗೆ ಬಳಿ ಬಂದಿತು. ಪೆಟ್ಟಿಗೆಯನ್ನು ಸುತ್ತು ಹಾಕಿ ಅದರ ಮೇಲೆ ಹಾರಿ ಮಾಯವೂ ಆಯಿತು!

**(ನೆರೂಡನ ಆತ್ಮಕಥೆಯ ಕನ್ನಡಾನುವಾದ – ನೆನಪು ತೆರೆವ ಕವಿಮನ – ಶ್ರೀಮತಿ ನಯನಾ ಕಶ್ಯಪ್ ಅವರದ್ದು – ಅಲ್ಲಿಂದ ಈ ಪುಟ ತೆರೆಯಲಾಗಿದೆ.)**

✵

---

ಒಂದು ದಿನ ಅಧಿಕಾರ ಸಿಕ್ಕರೆ
ಒಂದು ವರ್ಷಕ್ಕಾಗುವಷ್ಟು
ಒಂದು ವರ್ಷ ಅಧಿಕಾರ ಸಿಕ್ಕರೆ
ಹತ್ತು ವರ್ಷಕ್ಕಾಗುವಷ್ಟು
ಹತ್ತು ವರ್ಷ ಅಧಿಕಾರ ಸಿಕ್ಕರೆ
ಹತ್ತು ತಲೆಮಾರಿಗಾಗುವಷ್ಟು
ದೋಚಿಡುವುದೇ ಇಂದಿನ ರಾಜಕಾರಣ

– ಸುಕೇಲ್ತೂ

---

**ನಾ. ಕಸ್ತೂರಿಯವರ ಶಂಖವಾದ್ಯ ಪುಸ್ತಕದಲ್ಲಿರುವ**
**ಗಾದೆಗಳು ಮತ್ತು ನುಡಿಗಟ್ಟುಗಳು ಬೋಲ್ಡ್ ಅಕ್ಷರಗಳಲ್ಲಿವೆ**